ದೈನಂದಿನ/ ವೈಯಕ್ತಿಕ ನೈರ್ಮಲ್ಯ ದಿನಚರಿ, ನಿಮ್ಮ ಮತ್ತು ನಿಮ್ಮ ಸುತ್ತಮುತ್ತಲಿನ ಸ್ವಚ್ಛತೆಗೆ ಸಂಬಂಧಿಸಿದಂತೆ ಈ ಕೆಳಗಿನ–ವುಗಳನ್ನು ಗಮನಿಸಿ, ಕೋಷ್ಟಕವನ್ನು ತುಂಬಿರಿ .

| ಸ್ವಚ್ಛತೆಯ ಅಭ್ಯಾಸ | ಹೌದು/ಇಲ್ಲ | ಪಾಲಿಸಿದರೆ/ ಪಾಲಿಸದಿದ್ದರೆ ಏನಾಗಬಹುದು? |
|---|---|---|
| ಕೈ ತೊಳೆಯುವುದು | | |
| ಶುದ್ಧ ಉಡುಪು ಧರಿಸುವುದು | | |
| ಪಾದರಕ್ಷೆ ಧರಿಸುವುದು | | |
| ದಿನಕ್ಕೆ 2 ಬಾರಿ ಹಲ್ಲುಜ್ಜುವುದು | | |
| ದಿನವೂ ಸ್ನಾನ ಮಾಡುವುದು | | |
| ಉಗುರು ಕತ್ತರಿಸುವುದು | | |
| ಊಟಕ್ಕೂ ಮುಂಚೆ ಕೈ ತೊಳೆಯುವುದು | | |
| ತಲೆ ಕೂದಲನ್ನು ನಿಯಮಿತವಾಗಿ ತೊಳೆಯುವುದು | | |
| ದೇಹದ ಅಂಗಗಳ ಸ್ವಚ್ಛತೆ | | |
| ಎಲ್ಲೆಂದರಲ್ಲಿ ಉಗುಳುವುದು | | |
| ಪರಿಸರ ನೈರ್ಮಲ್ಯ | | |
| ಕಸವನ್ನು ಕಸದ ಬುಟ್ಟಿಗೇ ಹಾಕುವುದು | | |
| ವೈಯಕ್ತಿಕ ನೈರ್ಮಲ್ಯ | | |
| ಸಿಟ್ಟಿನಲ್ಲಿ ಅಸಭ್ಯವಾಗಿ ವರ್ತಿಸುವುದು | | |
| ಹಿರಿಯರೊಂದಿಗೆ ಗೌರವದಿಂದ ಮಾ–ತಾಡುವುದು | | |

@KTBS
NOT TO BE REPUBLISHED

**ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 14**

# ಆರೋಗ್ಯಕರ ಆಯ್ಕೆಯ ಹೆಜ್ಜೆಗಳು

J1B2K9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಆರೋಗ್ಯದ ಬಗ್ಗೆ ಅರಿವು ಪಡೆದು, ಹದಿಹರೆಯದ ಬದಲಾವಣೆಗಳನ್ನು ಸಹಜವಾಗಿ ಸ್ವೀಕರಿಸಿ, ಆರೋಗ್ಯಕರ ಅಭ್ಯಾಸಗಳು ಮತ್ತು ಸರಿಯಾದ ಸಂವಹನದ ಮೂಲಕ ಸುಸ್ಥಿರ ಜೀವನ ಶೈಲಿಯನ್ನು ರೂಪಿಸಿಕೊಳ್ಳುವರು.**

**ಚಟುವಟಿಕೆ 1 :** ಆರೋಗ್ಯದ ಕಾರ್ಡ್ ಗಳು

"ಈ ಕಾರ್ಡ್‌ಗಳನ್ನು ಓದಿ, ಇದು ಒಳ್ಳೆಯ ಅಭ್ಯಾಸವೇ ಅಥವಾ ಕೆಟ್ಟ ಅಭ್ಯಾಸವೇ ಎಂದು ಗುರುತಿಸಿ, ಏಕೆಂದು ಬರೆಯಿರಿ ಮತ್ತು ನಾನು ಏನು ಮಾಡಬೇಕು? ಎಂಬುದರಲ್ಲಿ ನಿಮ್ಮ ಮುಂದಿನ ನಿರ್ಧಾರವನ್ನು ದಾಖಲಿಸಿ."

| ಕಾರ್ಡ್ ಸಂಖ್ಯೆ | ಅಭ್ಯಾಸಗಳು | ಇದು ಒಳ್ಳೆಯದಾ? ಕೆಟ್ಟದಾ? | ನಾನು ಏನು ಮಾಡಬೇಕು? ಮಾಡಬಾರದು? |
|---|---|---|---|
| 1 | "ಬೆಳಿಗ್ಗೆ ಉಪಹಾರ ತಿನ್ನದೇ ಶಾಲೆಗೆ ಬರು–ತ್ತೇನೆ." | | |
| 2 | ನಾನು ದಿನಕ್ಕೆ ಸಾಕಷ್ಟು ನೀರು ಕುಡಿಯಲು ಪ್ರಯತ್ನಿಸುತ್ತೇನೆ." | | |
| 3 | "ಹಣ್ಣು ಮತ್ತು ಹಸಿರು ಸೊಪ್ಪು ನನ್ನ ಆಹಾ–ರದಲ್ಲಿ ಸೇರಿಸಲು ಪ್ರಯತ್ನಿಸುತ್ತೇನೆ." | | |
| 4 | ರಾತ್ರಿ ತಡವಾಗಿ ನಿದ್ರೆ ಮಾಡಿ ಬೆಳಿಗ್ಗೆ ದಣಿ–ವಾಗಿರುತ್ತದೆ." | | |
| 5 | ನಿದ್ರೆಗೆ ಮೊದಲು ಮೊಬೈಲ್ ಬಳಕೆ ಕಡಿಮೆ ಮಾಡುತ್ತೇನೆ | | |
| 6 | ಆಟ ಆಡುವ ಬದಲು ವಿಡಿಯೋ/ಗೇಮ್ ಆಡುತ್ತೇನೆ | | |
| 7 | ಮೊಬೈಲ್ ಇಲ್ಲದೆ ಬೇಸರವಾಗುತ್ತದೆ | | |
| 8 | ಒತ್ತಡ ಬಂದಾಗ ಪೋಷಕರಿಗೆ ಅಥವಾ ಗುರುಗಳಿಗೆ ಹೇಳುತ್ತೇನೆ | | |
| 9 | ಸ್ನೇಹಿತರು ಅನಗತ್ಯ ಕೆಲಸಗಳಿಗೆ ಒತ್ತಾಯಿ–ಸಿದರೂ 'ಇಲ್ಲ' ಎಂದು ಹೇಳಲು ಆಗುವುದಿಲ್ಲ | | |

@KTBS NOT TO BE REPUBLISHED

**ಚಟುವಟಿಕೆ 2 :** ನನ್ನ ಭಾವನೆಗಳು– ನನ್ನ ಮಾತು

ನಿಮಗೆ ಆಗಾಗ್ಗೆ ಉಂಟಾಗುವ ಭಾವನೆಗಳನ್ನು ಗುರುತಿಸಿ, ಅವು ಯಾವ ಸಂದರ್ಭದಲ್ಲಿ ಬರುತ್ತವೆ ಮತ್ತು ಅವುಗಳನ್ನು ಹೇಗೆ ಸರಿಯಾಗಿ ವ್ಯಕ್ತಪಡಿಸಬಹುದು ಎಂಬುದನ್ನು ಬರೆಯಿರಿ.

| ಭಾವನೆ | ನನಗೆ ಯಾವಾಗ ಬರುತ್ತದೆ? | ನನ್ನ ದೇಹದಲ್ಲಿ ಆಗುವ ಬದಲಾವಣೆ | ನಾನು ಹೇಗೆ ವ್ಯಕ್ತಪಡಿಸುತ್ತೇನೆ? |
|---|---|---|---|
| ಸಂತೋಷ | | | |
| ದುಃಖ | | | |
| ಕೋಪ | | | |
| ಭಯ | | | |
| ಲಜ್ಜೆ | | | |
| ಗರ್ವ | | | |
| ಆತಂಕ | | | |
| ಅಸೂಯೆ | | | |

NOT TO BE REPUBLISHED @KTBS

**ಚಟುವಟಿಕೆ 3 :** ಈ ಕಥೆಯನ್ನು ಓದಿ, ಕಥೆಯ ಪಾತ್ರಗಳು ಹದಿಹರೆಯದ ಹಂತದಲ್ಲಿ ಎದುರುಗೊಂಡ ಬದಲಾವಣೆಗಳ–ನ್ನು ಮತ್ತು ಅನುಭವಗಳನ್ನು ಗಮನಿಸಿ, ಕೆಳಗೆ ನೀಡಿರುವ ಪ್ರಶ್ನೆಗಳನ್ನು ಉತ್ತರಿಸಿ.

**"ಹದಿಹರೆಯದ ಹೆಜ್ಜೆಗಳು"**

ರವಿ ಮತ್ತು ರಮ್ಯಾ 7ನೇ ತರಗತಿಯ ವಿದ್ಯಾರ್ಥಿಗಳು. ಇತ್ತೀಚೆಗೆ ಇಬ್ಬರಿಗೂ ತಮ್ಮೊಳಗೆ ಕೆಲವು ಹೊಸ ಅನುಭವಗಳು ಆಗುತ್ತಿರುವುದನ್ನು ಗಮನಿಸುತ್ತಿದ್ದಾರೆ. ರವಿಗೆ ತನ್ನ ದೇಹದಲ್ಲಿ ಬದಲಾವಣೆಗಳು ಕಾಣಿಸುತ್ತಿವೆ. ಅವನ ಧ್ವನಿ ನಿಧಾನವಾಗಿ ಗಟ್ಟಿಯಾಗುತ್ತಿದೆ. ಎತ್ತರ ಹೆಚ್ಚಾಗುತ್ತಿರುವಂತೆ ಅನಿಸುತ್ತಿದೆ. ಆಟ ಆಡಿದ ಮೇಲೆ ಬೇಗ ದಣಿವಾಗುತ್ತದೆ. ಕನ್ನಡಿಯ ಮುಂದೆ ನಿಂತಾಗ ಅವನಿಗೆ ತನ್ನ ಮುಖದ ಲಕ್ಷಣಗಳು ಬದಲಾಗುತ್ತಿರುವಂತೆ ತೋರುತ್ತದೆ. "ನಾನು ಏಕೆ ಇಂತಹ ಅನುಭವ ಮಾಡುತ್ತಿದ್ದೇನೆ?" ಎಂದು ಅವನು ಯೋಚಿಸುತ್ತಾನೆ.

ರಮ್ಯಾಗೆ ಕೆಲವೊಮ್ಮೆ ಕಾರಣವಿಲ್ಲದೆ ಸಂತೋಷ, ಕೆಲವೊಮ್ಮೆ ಬೇಸರ. ಓದುವಾಗ ಮನಸ್ಸು ಚಂಚಲವಾಗುತ್ತದೆ. ಕೆಲ ದಿನಗಳಲ್ಲಿ ದೇಹವೂ ಸ್ವಲ್ಪ ಸುಸ್ತಾಗುತ್ತದೆ. ಸ್ನೇಹಿತರ ಮಾತಿಗೆ ಬೇಗ ಕೋಪ ಬರುತ್ತಿರುವುದನ್ನು ಅವಳು ಗಮನಿಸುತ್ತಾಳೆ. "ನನ್ನಲ್ಲೇ ಏನಾದರೂ ತಪ್ಪೇ?" ಎಂಬ ಪ್ರಶ್ನೆ ಅವಳ ಮನಸ್ಸಿನಲ್ಲಿ ಮೂಡುತ್ತದೆ.

ಒಂದು ದಿನ ಶಾಲೆಯಲ್ಲಿ ವಿಜ್ಞಾನ ಪಾಠದಲ್ಲಿ ಶಿಕ್ಷಕಿ ಹದಿಹರೆಯದ ಬೆಳವಣಿಗೆ ಮತ್ತು ಬದಲಾವಣೆ ಬಗ್ಗೆ ವಿವರವಾಗಿ ಹೇಳುತ್ತಾರೆ. ಅವರು ಹೇಳುತ್ತಾರೆ - "ಈ ವಯಸ್ಸಿನಲ್ಲಿ ದೇಹ ಮಾತ್ರವಲ್ಲ, ಮನಸ್ಸು ಕೂಡ ಬೆಳೆಯುತ್ತದೆ. ಹಾರ್ಮೋನ್‌ಗಳ ಪರಿಣಾಮದಿಂದ ದೈಹಿಕ ಮತ್ತು ಮಾನಸಿಕ ಬದಲಾವಣೆಗಳು ಆಗುತ್ತವೆ. ಇವು ಎಲ್ಲವೂ ಸಹಜ. ಪ್ರತಿಯೊಬ್ಬರೂ ಒಂದೇ ಸಮಯದಲ್ಲಿ ಒಂದೇ ರೀತಿಯಲ್ಲಿ ಬೆಳೆಯುವುದಿಲ್ಲ." ಶಿಕ್ಷಕಿ ಮುಂದುವರಿಸಿ ಹೇಳುತ್ತಾರೆ – "ಸರಿಯಾದ ಆಹಾರ ತಿನ್ನಬೇಕು, ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು, ದಿನವೂ ಸ್ವಲ್ಪ ವ್ಯಾಯಾಮ ಮಾಡಬೇಕು. ಮನಸ್ಸಿನಲ್ಲಿ ಗೊಂದಲ ಬಂದಾಗ ಪೋಷಕರು, ಶಿಕ್ಷಕರು ಅಥವಾ ನಂಬಿಕೆಯ ವ್ಯಕ್ತಿಗಳೊಂದಿಗೆ ಮಾತನಾಡಬೇಕು." ಈ ಮಾತುಗಳನ್ನು ಕೇಳಿದ ಮೇಲೆ ರವಿ ಮತ್ತು ರಮ್ಯಾಗೆ

ಧೈರ್ಯ ಬರುತ್ತದೆ. ರವಿಗೆ ಈಗ ತನ್ನ ಧ್ವನಿಯ ಬದಲಾವಣೆ ಅಸಹಜವಲ್ಲ ಎಂಬುದು ಗೊತ್ತಾಗುತ್ತದೆ. ರಮ್ಯಾಗೆ ತನ್ನ ಭಾವನೆಗಳು ಸಹಜ ಎನ್ನುವ ಅರಿವು ಬರುತ್ತದೆ. ಶಾಲೆಯಿಂದ ಮನೆಗೆ ಹೋದ ನಂತರ ಅವರು ತಮ್ಮ ಅನುಭವಗಳನ್ನು ಪೋಷಕರೊಂದಿಗೆ ಹಂಚಿಕೊಳ್ಳುತ್ತಾರೆ. ಪೋಷಕರು ಸಹನೆಯಿಂದ ಕೇಳಿ, ಧೈರ್ಯ ತುಂಬುತ್ತಾರೆ. ಇದೀಗ ರವಿ ಮತ್ತು ರಮ್ಯಾಗೆ ಸ್ಪಷ್ಟವಾಗಿದೆ – ಹದಿಹರೆಯ ಎನ್ನುವುದು ಸಮಸ್ಯೆಯಲ್ಲ; ಅದು ಜೀವನದ ಹೊಸ, ಮಹತ್ವದ ಹಂತ.

1. ರವಿಯಲ್ಲಿ ಕಂಡು ಬಂದ ಎರಡು ದೈಹಿಕ ಬದಲಾವಣೆಗಳು ಯಾವುವು?

2. ರಮ್ಯಾಗೆ ಉಂಟಾದ ಮಾನಸಿಕ / ಭಾವನಾತ್ಮಕ ಬದಲಾವಣೆಗಳು ಯಾವುವು?

3. ಶಿಕ್ಷಕಿ ನೀಡಿದ ಒಂದು ಮುಖ್ಯ ಸಲಹೆ ಏನು?

4. ಕಥೆಯಿಂದ ನನಗೆ ಅರ್ಥವಾದ ಒಂದು ವಿಷಯ ಯಾವುದು?

5. ಕಥೆಯ ಆರಂಭದಲ್ಲಿ ರವಿ ಮತ್ತು ರಮ್ಯಾ ಹೇಗೆ ಭಾವಿಸಿದರು?

6. ಶಿಕ್ಷಕಿಯ ಮಾತು ಕೇಳಿದ ನಂತರ ಅವರಲ್ಲಿ ಏನು ಬದಲಾವಣೆ ಆಯಿತು?

7. ನನಗೂ ಇಂತಹ ಬದಲಾವಣೆಗಳ ಅನುಭವ ಇದ್ದರೆ ನಾನು ಏನು ಮಾಡಬೇಕು?

8. ಈ ಕಥೆ ನನ್ನ ಜೀವನಕ್ಕೆ ಹೇಗೆ ಉಪಯುಕ್ತವಾಗಿದೆ?

@KTBS NOT TO BE REPUBLISHED

**ಚಿಂತನೆ ಪ್ರಶ್ನೆ**

ಈ ಬದಲಾವಣೆಗಳು ಸಹಜವೇ? ನಿಮಗೆ ಏನು ಅನಿಸುತ್ತಿದೆ.

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 15

## ಉಷ್ಣ ಪ್ರಸರಣ

I6I8J9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಬಿಸಿಯ ಮಟ್ಟವನ್ನು ಅನುಭವದಿಂದ ತಿಳಿಯುವರು ಮತ್ತು ವಿವಿಧ ವಸ್ತುಗಳ ತಾಪವನ್ನು ತಾಪಮಾಪಕವನ್ನು ಬಳಸಿ ಅಳೆಯುವವರು.**

**ಚಟುವಟಿಕೆ 1 :** ಬಿಸಿ ಮತ್ತು ತಂಪಾದ ವಸ್ತುಗಳನ್ನು ಗುರುತಿಸಿ, ಬಿಸಿ ಮತ್ತು ತಂಪಾದ ವಸ್ತುಗಳ ಬಿಸಿ ಮಟ್ಟವನ್ನು ಹೋಲಿಸಿ ಕೋಷ್ಟಕದಲ್ಲಿ ಬರೆಯಿರಿ.

| ವಸ್ತುಗಳ ಹೆಸರು | ಬಿಸಿ | ತಂಪು | ವಸ್ತುಗಳ ಹೆಸರು | ಬಿಸಿ | ತಂಪು |
|---|---|---|---|---|---|
| ಕಾಫಿ | | | ಗಿಡದಲ್ಲಿರುವ ಹಣ್ಣು | | |
| ಕುದಿಯುತ್ತಿರುವ ಸಾಂಬಾರ್ | | | ಹೂ | | |
| ಐಸ್ ಕ್ರೀಮ್ | | | ಮಂಜುಗಡ್ಡೆ | | |
| ಐಸ್ ಕ್ಯಾಂಡಿ | | | ಉರಿಯುತ್ತಿರುವ ಬಲ್ಬ್ | | |
| ಫ್ರಿಜ್ಜಿನಲ್ಲಿಟ್ಟ ನೀರು | | | ಹಣತೆ | | |
| ಆಗ ತಾನೇ ತಯಾರಿಸಿದ ಅಡುಗೆ | | | ಹಿಮವಿರುವ ಸ್ಥಳ | | |

1. ಇಲ್ಲಿ ನೀವು ಬಿಸಿ ಅಥವಾ ತಂಪು ಎಂದು ಹೇಗೆ ತೀರ್ಮಾನಿಸಿದಿರಿ?

______________________________

**ಚಟುವಟಿಕೆ 2 :** ತಾಪದ ಅನುಭವ ಹೇಗಿದೆ? (ಪ್ರಯೋಗ)

ವಿವಿಧ ಉಷ್ಣತೆ ಹೊಂದಿದ ನೀರಿನ ಧಾರಕ/ಸಂಗ್ರಾಹಕಗಳನ್ನು ಬಳಸಿ, ನಿಮ್ಮ ಬೆರಳುಗಳನ್ನು ಪ್ರತ್ಯೇಕವಾಗಿ ಧಾರಕ 1, ಧಾರಕ 2 ಮತ್ತು ಧಾರಕ 3 ರಲ್ಲಿ ಇಡಿ. ಇವುಗಳಲ್ಲಿ ಯಾವ ಧಾರಕದ ನೀರು ಹೆಚ್ಚು ಬಿಸಿಯಾಗಿದೆ? ಯಾವ ಧಾರಕದ ನೀರು ಕಡಿಮೆ ಬಿಸಿಯಾಗಿದೆ? ಇವುಗಳಲ್ಲಿ ಕಡಿಮೆ ಬಿಸಿಯನ್ನು ಮತ್ತು ಹೆಚ್ಚು ಬಿಸಿಯನ್ನು ಹೇಳಲು 0–10 ಅಳತೆ ಪಟ್ಟಿಯಲ್ಲಿನ ಯಾವ ಸಂಖ್ಯೆಗಳನ್ನು ಆಯ್ಕೆ ಮಾಡಿದ್ದೀರಿ?

ಕಡಿಮೆ ಬಿಸಿ ______________ ಹೆಚ್ಚು ಬಿಸಿ ______________

1. ನಿಮ್ಮ ಎಲ್ಲಾ ಸ್ನೇಹಿತರು ಬರೆದಿರುವ ಸಂಖ್ಯೆ ಒಂದೇ ಆಗಿದೆಯೇ?______________________
2. ಹಾಗಾದರೆ ಎಲ್ಲರ ಅಳತೆ ಸರಿ ಎಂದು ಒಪ್ಪಬಹುದೇ? ______________________
3. ಈ ಅಳತೆಗಳು ನಿಖರವೇ? ______________________

@KTBS NOT TO BE REPUBLISHED

4. ಹಾಗಾದರೆ ತಾಪವನ್ನು ನಿಖರವಾಗಿ ಅಳೆಯಲು ಬಳಸುವ ಉಪಕರಣ ಇದೆಯೇ?____________________

5. ಇದ್ದರೆ ಅದು ಯಾವುದು? ____________________________________________

**ಚಟುವಟಿಕೆ 3 :** ನನ್ನ ಬಗ್ಗೆ ನಿಮಗೆಷ್ಟು ಗೊತ್ತು?



1. ಈ ಚಿತ್ರದಲ್ಲಿರುವ ಉಪಕರಣ ಯಾವುದೆಂದು ಹೇಳಬಲ್ಲಿರಾ?

____________________________________________

2. ಚಿತ್ರದಲ್ಲಿರುವ ತಾಪಮಾಪಕದ ಬುರುಡೆಯಲ್ಲಿ ಯಾವ ದ್ರವ ರೂಪದ ವಸ್ತು ಬಳಸಲಾಗಿದೆ?

____________________________________________

3. ತಾಪಮಾಪಕದ ಅಳತೆ ಪಟ್ಟಿಯಲ್ಲಿ ಅತಿ ಚಿಕ್ಕ ಸಂಖ್ಯೆ ಮತ್ತು ಅತಿ ದೊಡ್ಡ ಸಂಖ್ಯೆ ಯಾವುದೆಂದು ಬರೆಯಿರಿ?

____________________________________________

4. ಶಿಕ್ಷಕರು ಒದಗಿಸುವ ಪ್ರಯೋಗ ಶಾಲೆಯ ತಾಪಮಾಪಕವನ್ನು ಜಾಗರೂಕತೆಯಿಂದ ವೀಕ್ಷಿಸಿ. ಅದರಲ್ಲಿ ಬಳಸಲಾಗಿರುವ ದ್ರವ ಯಾವುದು?

____________________________________________

5. ಆ ಮಾಪಕದ ಕನಿಷ್ಠ ಸಂಖ್ಯೆ ________________ ಮತ್ತು ಗರಿಷ್ಠ ಸಂಖ್ಯೆ ________________

- ನೀವು ಜ್ವರದಿಂದ ಬಳಲುತ್ತಿದ್ದಾಗ ವೈದ್ಯರ ಬಳಿ ಹೋಗಿ ನಿಮ್ಮ ದೇಹದ ತಾಪವನ್ನು ಪರೀಕ್ಷಿಸಿಕೊಂಡಿರುವಿರಾ?

____________________________________________

- ಹಾಗಾದರೆ ವೈದ್ಯರು ಬಳಸುವ ತಾಪಮಾಪಕವೂ ನೀರಿನ ತಾಪವನ್ನು ಅಳೆಯಲು ಬಳಸಿದ ತಾಪಮಾಪಕ್ಕೂ ಇರುವ ವ್ಯತ್ಯಾಸವೇನು?

____________________________________________

@KTBS NOT TO BE REPUBLISHED

# ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 16
## ಉಷ್ಣ ಪ್ರಸರಣ ವಿಧಾನಗಳು

D1P7Z3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ಉಷ್ಣ ಪ್ರಸರಣದ ಉಷ್ಣ ವಹನ, ಸಂವಹನ, ವಿಕಿರಣ ಶೀಲ ವಿಧಾನಗಳನ್ನು ಸರಳ ಪ್ರಯೋಗಗಳಿಂದ ಅರ್ಥೈಸಿಕೊಳ್ಳುವರು.**

**ಚಟುವಟಿಕೆ 1 :** ಘನ ವಸ್ತುಗಳಲ್ಲಿ ಉಷ್ಣ ಪ್ರಸರಣ.



ಚಿತ್ರದಲ್ಲಿರುವಂತೆ ಪ್ರಯೋಗದ ಸಾಮಗ್ರಿಗಳನ್ನು ಜೋಡಿಸಿ, ಪ್ರಯೋಗವನ್ನು ವೀಕ್ಷಿಸಿದ ನಂತರ ಉತ್ತರಿಸಿ. ಲೋಹದ ಪಟ್ಟಿಯ ಮೇಲ್ಮೈಗೆ ಮೇಣದಿಂದ ಗುಂಡುಪಿನ್ನುಗಳನ್ನು ಅಂಟಿಸಿ. ಬಳಿಕ ಲೋಹದ ಪಟ್ಟಿಯ ಒಂದು ತುದಿಗೆ ಶಾಖವನ್ನು ನೀಡಿ.

1. ಮೇಣದ ಉಂಡೆಗಳಲ್ಲೇನು ಬದಲಾವಣೆಯಾಯಿತು? ಏಕೆ?

   ______________________________

2. ಇಲ್ಲಿ ಗುಂಡುಪಿನ್ನುಗಳನ್ನು ಅಂಟಿಸಿದ ಮೇಣದ ಉಂಡೆಗಳು ಒಂದಾದ ನಂತರ ಒಂದು, ಕಳಚಿ ಬೀಳಲು ಕಾರಣವೇನು?

   ______________________________

3. ಈ ರೀತಿಯಾಗಿ ಶಾಖ ವರ್ಗಾವಣೆಯಾಗುವುದನ್ನು ಏನೆನ್ನುವರು?

   ______________________________

4. ಬಿಸಿ ನೀರಿನಲ್ಲಿ ಇರಿಸಲಾಗಿರುವ ಪ್ಲಾಸ್ಟಿಕ್ ಸ್ಕೇಲ್, ಪೆನ್ಸಿಲ್, ಬೀಗದ ಕೀ, ಸ್ಟೀಲ್ ಚಮಚ ಇವುಗಳಲ್ಲಿ ಯಾವುದನ್ನು ಹಿಡಿದರೆ ಬಿಸಿಯ ಅನುಭವವಾಗುತ್ತದೆ. ಏಕೆ?

   ______________________________

@KTBS NOT TO BE REPUBLISHED

**ಚಟುವಟಿಕೆ 2 :** ದ್ರವ ವಸ್ತುಗಳಲ್ಲಿ ಉಷ್ಣ ಪ್ರಸರಣ.



ನೀವೀಗ ಶಿಕ್ಷಕರ ಮಾರ್ಗದರ್ಶನದಲ್ಲಿ ಒಂದು ಗಾಜಿನ ಜಾಡಿಯನ್ನು ತೆಗೆದುಕೊಂಡು ಅದರಲ್ಲಿ ನೀರನ್ನು ಹಾಕಿ ಬಳಿಕ ನೀರಿಗೆ ಐದಾರು ಹನಿ ಬಣ್ಣ ಅಥವಾ ಇಂಕನ್ನು ಹಾಕಿ ನೀರನ್ನು ಬಿಸಿ ಮಾಡಲು ಪ್ರಾರಂಭಿಸಿ.

1. ಆರಂಭ ಮತ್ತು ಅಂತ್ಯದಲ್ಲಿನ ತಾಪ ಒಂದೇ ಆಗಿದೆಯೇ?

   ______________________________

2. ನೀರನ್ನು ಬಿಸಿ ಮಾಡುತ್ತಿದ್ದಂತೆ ಬಣ್ಣದ ಹನಿಗಳ ಚಲನೆಯಲ್ಲಿ ಏನನ್ನು ಗಮನಿಸಿದಿರಿ?

   ______________________________

3. ಹೀಗೆ ಶಾಖದಿಂದ ನೀರಿನ ಕಣಗಳ ಚಲನೆ ಮೇಲಿಂದ ಕೆಳಕ್ಕೆ ಹಾಗೂ ಕೆಳಗಿನಿಂದ ಮೇಲಕ್ಕೆ ಸಾಗುವುದನ್ನು ಏನೆನ್ನುವರು?

______________________________

**ಚಟುವಟಿಕೆ 3 :** ಅನಿಲಗಳಲ್ಲಿ ಉಷ್ಣ ಪ್ರಸರಣ.

ಶಿಕ್ಷಕರ ಮಾರ್ಗದರ್ಶನದಲ್ಲಿ ಚಿತ್ರದಲ್ಲಿರುವಂತೆ ಪ್ರಯೋಗವನ್ನು ಕೈಗೊಂಡು ವೀಕ್ಷಿಸಿದ ನಂತರ ನಿಮ್ಮ ಅನುಭವವನ್ನು ಕೋಷ್ಟಕದಲ್ಲಿ ಸರಿ (✓) ಗುರುತು ಹಾಕಿ ತೋರಿಸಿ.

| ಬೆಂಕಿಯ ಬಳಿ ನಿಮ್ಮ ಕೈಗಳ ಸ್ಥಾನ | ಹೆಚ್ಚು ಬಿಸಿ | ಕಡಿಮೆ ಬಿಸಿ |
|---|---|---|
| ಬೆಂಕಿ ಜ್ವಾಲೆಯ ಮೇಲೆ | | |
| ಬೆಂಕಿ ಜ್ವಾಲೆಯ ಪಕ್ಕ | | |



1. ಎರಡು ಸ್ಥಾನದಲ್ಲಿನ ಕೈಗಳ ಬಿಸಿಯ ಮಟ್ಟ ಒಂದೇ ಆಗಿದೆ?

______________________________

2. ಬೆಂಕಿಯ ಪಕ್ಕದಲ್ಲಿರುವ ನಮಗೆ ಶಾಖದ ಅನುಭವವಾಗಲು ಬೆಂಕಿ ಮತ್ತು ನಮ್ಮ ನಡುವಿನ ಯಾವ ಮಾಧ್ಯಮ ಕಾರಣವಾಯಿತು?

______________________________

3. ಈ ರೀತಿಯಾಗಿ ಶಾಖ ಪ್ರಸರಣೆಯಾಗುವುದನ್ನು ಏನೆನ್ನುವರು?

______________________________

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 17
## ಆಂದೋಲನ ಚಲನೆ

C8D2K2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಆಂದೋಲನ ಚಲನೆ ಬಗ್ಗೆ ತಿಳಿಯುವರು ಹಾಗೂ ಆವರ್ತನಾವಧಿಯನ್ನು ಲೆಕ್ಕ ಹಾಕುವರು.**

**ಚಟುವಟಿಕೆ 1 :** ಸರಳ ಲೋಲಕದ ಆವರ್ತನಾವಧಿ ಅಳೆಯುವುದು

ಅವಶ್ಯಕ ಸಾಮಗ್ರಿಗಳು: 1 ಮೀಟರ್ ಉದ್ದದ ದಾರ, ಲೋಹದ ಗುಂಡು ಅಥವಾ ಕಲ್ಲಿನ ತುಂಡು, ಬೆಂಬಲ ನೀಡುವ ಸ್ಟ್ಯಾಂಡ್, ಸ್ಟಾಪ್‌ವಾಚ್ ಅಥವಾ ಮೊಬೈಲ್ ಟೈಮರ್ ಅಥವಾ ಗಡಿಯಾರ.

ಒಂದು ಮೀಟರ್ ಉದ್ದದ ದಾರಕ್ಕೆ ಲೋಹದ ಗುಂಡನ್ನು ಕಟ್ಟಿ, ಅದನ್ನು ಸ್ಟ್ಯಾಂಡ್‌ಗೆ ಹಾಕಿ ತೂಗಿಸಿ. ಲೋಲಕವು ವಿಶ್ರಾಂತ ಸ್ಥಿತಿಯಲ್ಲಿ ನಿಂತ ನಂತರ, ಅದರ ಸಮಸ್ಥಿತಿಯ ಸ್ಥಾನವನ್ನು ನೆಲದ ಮೇಲೆ ಗುರುತು ಹಾಕಿ. ಗುಂಡನ್ನು ಒಂದು ಬದಿಗೆ ಸ್ವಲ್ಪ ಎಳೆದು ಬಿಡಿ (ತಳ್ಳಬೇಡಿ). ಗುಂಡು ತನ್ನ ಸ್ಥಿತಿಗೆ ಹಿಂದಿರುಗಿ, ಮತ್ತೆ ಬರುವುದನ್ನು ಒಂದು ಆಂದೋಲನ ಎಂದು ಪರಿಗಣಿಸಿ. ಸ್ಟಾಪ್‌ವಾಚ್ ಬಳಸಿಕೊಂಡು, 10 ಆಂದೋಲನಗಳಿಗೆ ಬೇಕಾದ ಸಮಯವನ್ನು ಅಳೆಯಿರಿ ಮತ್ತು ಕೋಷ್ಟಕದಲ್ಲಿ ಈ ರೀತಿಯಾಗಿ ಐದು ಬಾರಿ ಪ್ರಯೋಗ ಮಾಡಿ.

@KTBS NOT TO BE REPUBLISHED

| ಕ್ರಮ ಸಂಖ್ಯೆ | 10 ಆಂದೋಲನಕ್ಕೆ ತೆಗೆದುಕೊಂಡ ಕಾಲ (ಸೆಕೆಂಡ್ ಗಳಲ್ಲಿ) | ಆವರ್ತನಾವಧಿ = 10 ಆಂದೋಲನಗಳಿಗೆ ತೆಗೆದುಕೊಂಡ ಕಾಲ / 10 | ಏನನ್ನು ಗಮನಿಸಿದಿರಿ? |
|---|---|---|---|
| 1 ನೇ ಬಾರಿ | | | |
| 2ನೇ ಬಾರಿ | | | |
| 3ನೇ ಬಾರಿ | | | |
| 4ನೇ ಬಾರಿ | | | |
| 5ನೇ ಬಾರಿ | | | |

1. ಎಲ್ಲಾ ವೀಕ್ಷಣೆಗಳಲ್ಲಿಯೂ ಆವರ್ತನಾವಧಿಯು ಸಮಾನವಾಗಿದೆಯೆ?

______________________________

2. ಲೋಲಕದ ಪ್ರಾರಂಭದ ಸ್ಥಾನವನ್ನು ಸ್ವಲ್ಪ ಬದಲಾಯಿಸಿದಾಗ ಕಾಲದಲ್ಲಿ ಬದಲಾವಣೆ ಕಾಣಿಸಿತ್ತೆ?

______________________________

3. ನಿಮ್ಮ ಅನುಭವದಲ್ಲಿ ಲೋಲಕದ ಉದ್ದ ಕಾಲದ ಮೇಲೆ ಪರಿಣಾಮ ಬೀರಿತ್ತೆ?

______________________________

**ಚಟುವಟಿಕೆ 2 :** ಲೋಲಕದ ಉದ್ದ ಮತ್ತು ಆವರ್ತನಾವಧಿ

ಲೋಲಕದ ಉದ್ದ ಬದಲಾದಾಗ ಆವರ್ತನಾವಧಿಯು ಹೇಗೆ ಬದಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳಿ. ಅದಕ್ಕಾಗಿ 50 ಸೆಂ.ಮೀ. 75 ಸೆಂ.ಮೀ. 100 ಸೆಂ.ಮೀ.ಅಳತೆಯುಳ್ಳ 3 ದಾರಗಳನ್ನು ತಯಾರಿಸಿಕೊಳ್ಳಿ. ಪ್ರತಿಯೊಂದು ಉದ್ದಕ್ಕೆ ಲೋಹದ ಗುಂಡನ್ನು ತೂಗಿ, ಸರಳ ಲೋಲಕ ತಯಾರಿಸಿಕೊಳ್ಳಿ. ಪ್ರತಿ ಲೋಲಕದಿಂದ 10 ಆಂದೋಲನಗಳಿಗೆ ತೆಗೆದುಕೊಳ್ಳುವ ಸಮಯ ಅಳೆಯಿರಿ. ಈ ಸಮಯಗಳನ್ನು ಕೋಷ್ಟಕದಲ್ಲಿ ದಾಖಲಿಸಿ, ಆವರ್ತನಾವಧಿ ಲೆಕ್ಕಿಸಿ ಮತ್ತು ಮೂರು ಲೋಲಕಗಳ ಆವರ್ತನಾವಧಿಗಳನ್ನು ಹೋಲಿಸಿ.

| ದಾರದ ಉದ್ದ (ಸೆಂಟಿಮೀಟರ್‌ಗಳಲ್ಲಿ) | 10 ಆಂದೋಲನಗಳಿಗೆ ತೆಗೆದುಕೊಂಡ ಸಮಯ (ಸೆಕೆಂಡ್‌ಗಳಲ್ಲಿ) | ಆವರ್ತನಾವಧಿ = 10 ಆಂದೋಲನ ಗಳಿಗೆ ತೆಗೆದುಕೊಂಡ ಕಾಲ / 10 | ಏನನ್ನು ಗಮನಿಸಿದಿರಿ? |
|---|---|---|---|
| 50 ಸೆಂ.ಮೀ | | | |
| 75 ಸೆಂ.ಮೀ | | | |
| 100 ಸೆಂ.ಮೀ | | | |

**ಚಟುವಟಿಕೆ 3 :** ಲೋಲಕದ ಭಾರ ಮತ್ತು ಆವರ್ತನಾವಧಿ.

ಲೋಲಕದ ಭಾರ ಬದಲಾದಾಗ ಆವರ್ತನಾವಧಿಯ ಮೇಲೆ ಪರಿಣಾಮ ಬೀರುತ್ತದೆಯೇ ಎಂಬುದನ್ನು ಅರ್ಥಮಾಡಿಕೊಳ್ಳಿ. ಒಂದೇ ಉದ್ದದ ದಾರಕ್ಕೆ ಮೂರು ಭಿನ್ನ ತೂಕದ ಗುಂಡುಗಳನ್ನು / ಹಳೆಯ ನಾಣ್ಯಗಳನ್ನು / ಕಲ್ಲುಗಳನ್ನು / ಲೋಹದ ತುಂಡುಗಳನ್ನು ಬಳಸಿ ಲೋಲಕ ತಯಾರಿಸಿ. ಪ್ರತಿ ಲೋಲಕದಿಂದ 10 ಆಂದೋಲನಗಳಿಗೆ ತೆಗೆದುಕೊಳ್ಳುವ ಸಮಯ ಅಳೆಯಿರಿ. ಫಲಿತಾಂಶಗಳನ್ನು ಕೋಷ್ಟಕದಲ್ಲಿ ದಾಖಲಿಸಿ.

@KTBS NOT TO BE REPUBLISHED

| ಲೋಲಕದ ಭಾರ (ಗ್ರಾಂ ಗಳಲ್ಲಿ) | 10 ಆಂದೋಲನಗಳಿಗೆ ತೆಗೆದುಕೊಂಡ ಸಮಯ (ಸೆಕೆಂಡ್ ಗಳಲ್ಲಿ) | ಆವರ್ತನಾವಧಿ = 10 ಆಂದೋಲನಗಳಿಗೆ ತೆಗೆದುಕೊಂಡ ಕಾಲ / 10 | ಏನನ್ನು ಗಮನಿಸಿದಿರಿ? |
|---|---|---|---|
| | | | |
| | | | |
| | | | |

1. ಭಾರ ಬದಲಾದಾಗ ಆಂದೋಲನದ ಸಮಯ ಬದಲಾಗಿತ್ತೇ?__________
2. ಆವರ್ತನಾವಧಿಗೆ ಲೋಲಕದ ತೂಕದ ಪ್ರಭಾವವಿದೆಯೇ?__________

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 18

# ಜವ ಮತ್ತು ವೇಗ

S3V8E9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ವಸ್ತು ಚಲಿಸಿದ ದೂರ ಮತ್ತು ಅದು ತೆಗೆದುಕೊಂಡ ಕಾಲವನ್ನು ಪರಿಗಣಿಸಿ ಜವ ಮತ್ತು ವೇಗವನ್ನು ಅರ್ಥೈಸಿಕೊಳ್ಳುವರು.**

**ಚಟುವಟಿಕೆ 1 :** ಚೆಂಡಿನ ಜವ ಅಳೆಯುವುದು.

ಅವಶ್ಯಕ ವಸ್ತುಗಳು: ಚೆಂಡು, ಅಳತೆಯ ಟೇಪ್/ಪಟ್ಟಿ, ಸ್ಟಾಪ್‌ವಾಚ್.

ನೆಲದ ಮೇಲೆ ಒಂದು ರೇಖೆಯನ್ನು ಎಳೆಯಿರಿ. ಅಲ್ಲಿಂದ ನಾಲ್ಕು ಮೀಟರ್ ದೂರದಲ್ಲಿ ಮತ್ತೊಂದು ರೇಖೆಯನ್ನು ಎಳೆದು, ನಿಮ್ಮ ಸ್ನೇಹಿತರನ್ನು ನಿಲ್ಲಿಸಿ. ಮೊದಲ ಗೆರೆಯಿಂದ ನಿಧಾನವಾಗಿ ಎರಡನೇ ಗೆರೆಯವರೆಗೆ ಚೆಂಡು ಉರುಳುವ ಹಾಗೆ ಬಲ ಪ್ರಯೋಗಿಸಿ. ಮೊದಲ ಗೆರೆಯಿಂದ ಅಂತಿಮ ಗೆರೆಯನ್ನು ಮುಟ್ಟಲು ಚೆಂಡು ತೆಗೆದುಕೊಂಡ ಸಮಯವನ್ನು ಚಟುವಟಿಕೆ ಹಾಳೆಯಲ್ಲಿನ ಕೋಷ್ಟಕದಲ್ಲಿ ಬರೆದುಕೊಳ್ಳಿ.

| ಪ್ರಯತ್ನ | ಗೆರೆ ದಾಟಿದ ಸಮಯ (ಸೆ.ಗಳಲ್ಲಿ) | ನಿಂತ ಸಮಯ (ಸೆ.ಗಳಲ್ಲಿ) | ಆರಂಭದಿಂದ ನಿಲ್ಲುವವರೆಗಿನ ಸಮಯ (ಸೆ. ಗಳಲ್ಲಿ) | ಚಲಿಸಿದ ದೂರ ಮೀ.ಗಳಲ್ಲಿ | ಜವ = ಚಲಿಸಿದ ದೂರ/ಕಾಲ ಮೀ / ಸೆ ಗಳಲ್ಲಿ |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |

@KTBS NOT TO BE REPUBLISHED

**ಚಟುವಟಿಕೆ 2 :** ನನ್ನ ನಡಿಗೆಯ ಜವ.

ಮಕ್ಕಳೇ ನೀವೀಗ ನಿಮ್ಮ ಶಿಕ್ಷಕರ ಅನುಮತಿಯನ್ನು ಪಡೆದು ಶಾಲೆಯ ಆಟದ ಮೈದಾನವನ್ನು ಒಂದು ಸುತ್ತು ವೇಗದ ನಡಿಗೆ ಮಾಡಬೇಕು. ಅದಕ್ಕಾಗಿ ನಿನ್ನ ಜೊತೆ ನಿನ್ನ ಮೂರು ಜನ ಸ್ನೇಹಿತರನ್ನು ಸಹ ಈ ನಡಿಗೆಗೆ ಬಳಸಿಕೋ. ನಿನ್ನ ಶಾಲೆಯ ಆಟದ ಮೈದಾನ ಎಷ್ಟು ಮೀಟರ್ ದೂರವಿದೆ ಎಂಬುದನ್ನು ಅಂದಾಜಿಸಿ ಶಿಕ್ಷಕರ ಸಹಾಯದಿಂದ ಕೋಷ್ಟಕದಲ್ಲಿ ಬರೆದುಕೊ. (ಶಾಲೆಯಲ್ಲಿ ಆಟದ ಮೈದಾನ ಚಿಕ್ಕದಾಗಿದ್ದರೆ ಎರಡು ಸುತ್ತು ಅಥವಾ ಐದು ಸುತ್ತು ಹಾಕುವ ಮೂಲಕ ಸಾಗಿದ ದೂರವನ್ನು ಲೆಕ್ಕಹಾಕಿ ಈ ಆಟವನ್ನು ಆಡಿದರೆ ಉತ್ತಮ.) ಪ್ರತಿಯೊಬ್ಬರು ಪ್ರತ್ಯೇಕವಾಗಿ, ನಡಿಗೆಯನ್ನು ಆರಂಭಿಸುವ ಸಮಯ ಮತ್ತು ನಡಿಗೆಯನ್ನು ಮುಕ್ತಾಯಗೊಳಿಸಿದ ಸಮಯವನ್ನು ಬರೆದುಕೊಂಡು ನಡಿಗೆಗೆ ತೆಗೆದುಕೊಂಡ ಸಮಯವನ್ನು ಲೆಕ್ಕ ಹಾಕಬೇಕು. ಕೊನೆಗೆ ಕೋಷ್ಟಕದ ಸಹಾಯದಿಂದ ನಿಮ್ಮ ಮತ್ತು ನಿನ್ನ ಸ್ನೇಹಿತರ ಜವ ಎಷ್ಟೆಂದು ಸೂತ್ರದ ಸಹಾಯದಿಂದ ಕೋಷ್ಟಕದಲ್ಲಿ ದಾಖಲಿಸಿ ಲೆಕ್ಕ ಹಾಕಬೇಕು.

| ಹೆಸರು | ನಡಿಗೆಯ ಅಂತರ ಮೀ ಗಳಲ್ಲಿ | ತೆಗೆದುಕೊಂಡ ಸಮಯ (ಸೆ ಗಳಲ್ಲಿ) | ಜವ = ಚಲಿಸಿದ ದೂರ/ ಕಾಲ ಮೀ/ಸೆ ಗಳಲ್ಲಿ |
|---|---|---|---|
| | | | |
| | | | |
| | | | |
| | | | |

1. ಎಲ್ಲರ ನಡುವೆ ಅತಿ ಹೆಚ್ಚು ಜವ ಯಾರದ್ದು?

_______________________________________________

_______________________________________________

2. ಚಟುವಟಿಕೆ ಒಂದು ಮತ್ತು ಎರಡನ್ನು ಗಮನಿಸಿದಾಗ, ಚೆಂಡಿನ ಜವ ಹೆಚ್ಚಿದೆಯೇ? ಅಥವಾ ನಡಿಗೆಯ ಜವ ಹೆಚ್ಚಿದೆಯೇ?

_______________________________________________

_______________________________________________

3. ಎರಡು ನಿಲ್ದಾಣಗಳ ನಡುವಿನ ಅಂತರ 840 ಮೀಟರ್ ಇದ್ದು, ಒಬ್ಬ ಸೈಕಲ್ ಸವಾರ ಈ ದೂರವನ್ನು ಕ್ರಮಿಸಲು 80 ಸೆಕೆಂಡ್ ತೆಗೆದುಕೊಂಡರೆ ಅವನು ಕ್ರಮಿಸಿದ ಪ್ರಯಾಣದ ಜವವೆಷ್ಟು?

_______________________________________________

_______________________________________________

**ಚಟುವಟಿಕೆ 3 :** ನಿಮ್ಮ ಸ್ನೇಹಿತನ ವೇಗವನ್ನು ಲೆಕ್ಕಹಾಕಿ. ಈ ಮುಂದಿನ ಚಟುವಟಿಕೆಯಲ್ಲಿ ಚಟುವಟಿಕೆ–2 ನ್ನು ಪುನರಾವರ್ತಿಸಿ. ನಿಮ್ಮ ಸ್ನೇಹಿತನ ಆರಂಭಿಕ ಹಾಗು ಅಂತಿಮ ಬಿಂದುವಿನ ನಡುವಿನ ಕನಿಷ್ಟ ಅಂತರ (ಸ್ಥಾನಪಲ್ಲಟ) ಅಳೆದು, ಸೂತ್ರದ ಸಹಾಯದಿಂದ ವೇಗವನ್ನು ಲೆಕ್ಕ ಹಾಕಿ.

| ಹೆಸರು | ನಡಿಗೆಯ ಅಂತರ (ಮೀ ಗಳಲ್ಲಿ) | ತೆಗೆದುಕೊಂಡ ಸಮಯ (ಸೆಂ ಗಳಲ್ಲಿ) | ವೇಗ = ಸ್ಥಾನಪಲ್ಲಟ/ಕಾಲ (ಮೀ/ಸೆಂ ಗಳಲ್ಲಿ) |
|---|---|---|---|
| | | | |
| | | | |
| | | | |

©KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 19
## ಜವ, ದೂರ ಮತ್ತು ಕಾಲದ ನಡುವಿನ ಸಂಬಂಧ

G8U6Z7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಜವ, ದೂರ ಮತ್ತು ಸಮಯಗಳ ನಡುವಿನ ಸಂಬಂಧ ತಿಳಿಯುವರು ಮತ್ತು ನಿತ್ಯ ಜೀವನದಲ್ಲಿ ಅವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸುವರು.**

**ಚಟುವಟಿಕೆ 1 :** ಜವವನ್ನು ಕಂಡುಹಿಡಿಯೋಣ

ವಿದ್ಯಾರ್ಥಿಗಳೇ ನೀವು ಈಗಾಗಲೇ ಜವದ ಬಗ್ಗೆ ತಿಳಿದಿದ್ದೀರಿ , ಸ್ಮರಿಸಿಕೊಳ್ಳಿ

**ಜವ = ಚಲಿಸಿದ ದೂರ ÷ ಕಾಲ**

ಹಾಗಾದರೆ ಈ ಕೋಷ್ಟಕ ಭರ್ತಿಮಾಡಿ

| ದೂರ (ಮೀ) | ಸಮಯ (ಸೆ) | ಜವ=ದೂರ/ಕಾಲ (ಮೀ/ಸೆ) |
|---|---|---|
| 12 | 3 | ಉದಾ: 12 ÷ 3 = 4 |
| 20 | 5 | |
| 18 | 6 | |

@KTBS NOT TO BE REPUBLISHED

**ಚಟುವಟಿಕೆ 2 :** ಕೆಳಗಿನ ಸಂದರ್ಭಗಳಲ್ಲಿ ಜವವನ್ನು ಲೆಕ್ಕ ಹಾಕಿ.

1. ಒಬ್ಬ ಬಾಲಕ 24 ಮೀ ದೂರವನ್ನು 6 ಸೆಕೆಂಡುಗಳಲ್ಲಿ ಓಡುತ್ತಾನೆ.
   ಬಾಲಕನ ಜವ = -----------
2. ಒಂದು ಆಟದ ಕಾರು 15 ಮೀ ದೂರವನ್ನು 3 ಸೆಕೆಂಡುಗಳಲ್ಲಿ ಸಾಗುತ್ತದೆ.
   ಕಾರಿನ ಜವ = -----------

**ಯೋಚಿಸಿ** : ದೂರ ಹೆಚ್ಚಾಗಿ ಸಮಯ ಅಷ್ಟೇ ಇದ್ದರೆ ವೇಗದಲ್ಲಿ ಏನು ಬದಲಾವಣೆ ಉಂಟಾಗುತ್ತದೆ?

**ಚಟುವಟಿಕೆ 3 :** ದೂರವನ್ನು ಕಂಡುಹಿಡಿಯುವುದು ಹೇಗೆ ?

ವಿದ್ಯಾರ್ಥಿಗಳೇ ಮೇಲಿನ ಚಟುವಟಿಕೆಯಲ್ಲಿ ಜವವನ್ನು ಲೆಕ್ಕ ಹಾಕುವ ಬಗ್ಗೆ ಕಲಿತಿರಿ ಈಗ ಜವ ಮತ್ತು ಸಮಯದ ಆಧಾರದ ಮೇಲೆ ದೂರವನ್ನು ಕಂಡುಹಿಡಿಯುವುದನ್ನು ತಿಳಿಯೋಣ.

ತಿಳಿಯಿರಿ : ದೂರ = ಜವ × ಸಮಯ

ಉದಾಹರಣೆ ನೋಡಿ ಕೋಷ್ಟಕ ಭರ್ತಿಮಾಡಿ

| ಜವ (ಮೀ/ಸೆ) | ಸಮಯ (ಸೆ) | ದೂರ (ಮೀ) |
|---|---|---|
| 4 | 5 | ಉದಾ : 4 × 5 = 20 |
| 3 | 6 | |
| 2 | 10 | |

1. ಒಬ್ಬ ಸೈಕಲ್ ಸವಾರ 5 ಮೀ/ಸೆ ಜವದಲ್ಲಿ 8 ಸೆಕೆಂಡುಗಳು ಸಾಗುತ್ತಾನೆ. ಅವನು ಸಾಗಿದ ದೂರ = ----------
2. ಒಬ್ಬ ಓಟಗಾರ 3 ಮೀ/ಸೆ ಜವದಲ್ಲಿ 7 ಸೆಕೆಂಡುಗಳು ಸಾಗುತ್ತಾನೆ. ಅವನು ಸಾಗಿದ ದೂರ = -----------

ಯೋಚಿಸಿ : ಒಂದೇ ಸಮಯದಲ್ಲಿ ಹೆಚ್ಚು ಜವದಿಂದ ಸಾಗುವ ವಾಹನಗಳು ಹೆಚ್ಚು ದೂರವನ್ನು ಏಕೆ ಸಾಗುತ್ತವೆ?

**ಚಟುವಟಿಕೆ 4 :** ಸಮಯದ ಲೆಕ್ಕಾಚಾರ

ವಿದ್ಯಾರ್ಥಿಗಳೇ ಈಗ ದೂರ ಮತ್ತು ಜವದ ಆಧಾರದ ಮೇಲೆ ಸಮಯವನ್ನು ಲೆಕ್ಕಾಚಾರ ಮಾಡೋಣ.

ತಿಳಿಯಿರಿ : ಸಮಯ = ದೂರ ÷ ಜವ

@KTBS NOT TO BE REPUBLISHED

| ದೂರ (ಮೀ) | ಜವ (ಮೀ/ಸೆ) | ಸಮಯ (ಸೆ) |
|---|---|---|
| 20 | 4 | ಉದಾ : 20 ÷ 4 = 5 |
| 30 | 5 | |
| 18 | 3 | |

1. ಒಂದು ಬಸ್ 40 ಮೀ ದೂರವನ್ನು 8 ಮೀ/ಸೆ ಜವದಲ್ಲಿ ಸಾಗುತ್ತದೆ. ಅದು ತೆಗೆದುಕೊಳ್ಳುವ ಸಮಯ = ----------
2. ಒಂದು ನಾಯಿಯು 25 ಮೀ ದೂರವನ್ನು 5 ಮೀ/ಸೆ ಜವದಲ್ಲಿ ಓಡುತ್ತದೆ. ಅದು ತೆಗೆದುಕೊಳ್ಳುವ ಸಮಯ = ----------

ಯೋಚಿಸಿ : ಚಲನೆಯನ್ನು ಅಳೆಯುವಾಗ ಸಮಯ ಏಕೆ ಮುಖ್ಯವಾಗಿದೆ?

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 20
## ಪೋಷಣೆಯ ವಿಧಗಳು

T5G1P3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಆಹಾರ ಕ್ರಮದ ಆಧಾರದ ಮೇಲೆ ಜೀವಿಗಳನ್ನು ಸ್ವಪೋಷಕ ಮತ್ತು ಪರಪೋಷಕಗಳಾಗಿ ವರ್ಗೀಕರಿಸುವರು.**

**ಚಟುವಟಿಕೆ 1:** ನನ್ನ ಗುಂಪು ಯಾವುದು?

ಕೆಳಗೆ ನೀಡಿರುವ ಜೀವಿಗಳನ್ನು ಗಮನಿಸಿ. ಅವುಗಳ ಆಹಾರ ಕ್ರಮದ ಆಧಾರದ ಮೇಲೆ ವರ್ಗೀಕರಿಸಿ.
ದಾಸವಾಳ, ಅಣಬೆ, ನಾಯಿ, ಹುಲಿ, ಆನೆ, ಬೆಕ್ಕು, ಮಾವು, ಮಾನವ, ಹಲಸು, ಯೀಸ್ಟ್, ಜಂತುಹುಳು, ಸಿಂಹ, ಪಾಚಿ, ಕಲ್ಲುಹೂ, ಕರುಳಿನ ಬ್ಯಾಕ್ಟೀರಿಯಾ, ಜಿಗಣೆ, ಸೂರ್ಯಕಾಂತಿ, ತುಳಸಿ, ಬದನೆಕಾಯಿ, ಶೇಂಗಾ, ಗಿಡುಗ, ಆಮೆ, ಕರಡಿ, ಚಿಪ್ಪುಹಂದಿ, ಶಾರ್ಕ್.

| ತಮ್ಮ ಆಹಾರ ತಾವೇ ತಯಾರಿಸುವ ಜೀವಿಗಳು | ತಮ್ಮ ಆಹಾರಕ್ಕಾಗಿ ಇತರೆ ಜೀವಿಗಳನ್ನು ಅವಲಂಬಿಸಿರುವ ಜೀವಿಗಳು |
|---|---|
| | |

@KTBS NOT TO BE REPUBLISHED

**ಚಟುವಟಿಕೆ 2:** ಆಹಾರ ತಯಾರಿಕೆ ನನ್ನಿಂದಲೋ? ಇತರರಿಂದಲೋ?

ಕೆಳಗಿನ ಜೀವಿಗಳು ಸ್ವತಃ ಆಹಾರ ತಯಾರಿಸುತ್ತವೆಯೋ? ಅಥವಾ ಆಹಾರಕ್ಕಾಗಿ ಇತರೆ ಜೀವಿಗಳನ್ನು ಅವಲಂ–ಬಿಸಿವೆಯೋ? ಎಂಬುದನ್ನು ತಿಳಿದು ಅವು ಯಾವ ಗುಂಪಿಗೆ ಸೇರಿದೆ ಎಂದು ಸೂಚಿಸಿರಿ.

| ಕ್ರ. ಸಂ | ಜೀವಿಯ ಹೆಸರು | ಸ್ವತಃ ಆಹಾರ ತಯಾರಿಸುವೆನೆ? | | ನನ್ನ ಗುಂಪು ಯಾವುದು? | |
|---|---|---|---|---|---|
| | | ಹೌದು | ಇಲ್ಲ | ಸ್ವಪೋಷಕ | ಪರಪೋಷಕ |
| 1 | ರೇಷ್ಮೆಹುಳು | | | | |
| 2 | ದಾಸವಾಳ | | | | |
| 3 | ರಣಹದ್ದು | | | | |
| 4 | ಬದನೆಗಿಡ | | | | |
| 5 | ಹೆಬ್ಬಾವು | | | | |
| 6 | ಕಮಲದ ಗಿಡ | | | | |

**ಚಟುವಟಿಕೆ 3:** ನಾನು ಯಾವ ಬಗೆಯ ಆಹಾರ ಸೇವಿಸುವೆ?

ಪ್ರಾಣಿಗಳು ಸೇವಿಸುವ ಆಹಾರದ ಆಧಾರದ ಮೇಲೆ ಕೆಳಗಿನ ಪ್ರಾಣಿಗಳನ್ನು ವರ್ಗೀಕರಿಸಿ.



NOT TO BE REPUBLISHED ©KTBS

ಕೆಳಗಿನ ಪ್ರಾಣಿಗಳನ್ನು ಸಸ್ಯಾಹಾರಿ, ಮಾಂಸಹಾರಿ, ಮಿಶ್ರಹಾರಿಗಳಾಗಿ ವಿಂಗಡಿಸಿ.

(ಹಸು, ಸಿಂಹ, ಕರಡಿ, ಮೇಕೆ,ಹುಲಿ, ಕೋತಿ,ಕುರಿ,ನರಿ, ಹಂದಿ, ಆನೆ, ಚಿರತೆ, ಕೋಳಿ, ಕುದುರೆ, ತೋಳ, ಕಾಗೆ, ಒಂಟೆ,ಬೆಕ್ಕು, ನಾಯಿ, ಜಿಂಕೆ, ಗಿಡುಗ, ಬಾತುಕೋಳಿ, ಮೊಲ, ಹದ್ದು,ಇಲಿ, ಜಿರಾಫೆ, ಹಾವು, ಅಳಿಲು,ಎಮ್ಮೆ, ಮೊಸಳೆ, ನವಿಲು, ಕತ್ತೆ, ತಿಮಿಂಗಲ, ಚಿಂಪಾಂಜಿ,ಕಾಂಗರೂ, ಮುಂಗೂಸಿ, ಕಪ್ಪೆ, ಮನುಷ್ಯ, ಕಾಡೆಮ್ಮೆ,ಗೂಬೆ)

| ಸಸ್ಯಾಹಾರಿ | ಮಾಂಸಹಾರಿ | ಮಿಶ್ರಹಾರಿ |
|---|---|---|
| | | |
| | | |
| | | |
| | | |
| | | |
| | | |

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 21
## ಮಾನವನ ಜೀರ್ಣಾಂಗ ವ್ಯೂಹ

W4L8V2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಮಾನವ ಜೀರ್ಣಕ್ರಿಯೆಯನ್ನು ಚಿತ್ರ ಸಹಿತ ವಿವರಿಸುವರು.**

**ಚಟುವಟಿಕೆ 1 :** ಕೆಳಗಿನ ಮಾನವನ ಜೀರ್ಣಾಂಗ ವ್ಯೂಹದ ಚಿತ್ರ ಬರೆಯುವ ಹಂತಗಳನ್ನು ಅನುಸರಿಸಿ, ಚಿತ್ರ ರಚಿಸಿ ಭಾಗಗಳನ್ನು ಗುರುತಿಸಿರಿ.



@KTBS NOT TO BE REPUBLISHED

**ಚಟುವಟಿಕೆ 2 :** ಈ ಕೆಳಗಿನ ಜೀರ್ಣಕ್ರಿಯೆಯ ಹಂತಗಳನ್ನು ಸರಿಯಾದ ಕ್ರಮದಲ್ಲಿ ಗೆರೆ ಎಳೆದು ಜೋಡಿಸಿ ಮತ್ತು ಅವುಗಳ ಕಾರ್ಯಗಳನ್ನು ಹೊಂದಿಸಿ ಬರೆಯಿರಿ.
(ದೊಡ್ಡ ಕರುಳು, ಅನ್ನನಾಳ, ಲಾಲಾರಸ, ಗಂಟಲು, ಸಣ್ಣ ಕರುಳು, ಗುದದ್ವಾರ, ಜಠರ, ಬಾಯಿ)

| ಕ್ರ ಸಂ | ಜೀರ್ಣಕ್ರಿಯೆ ಭಾಗಗಳು | ಕಾರ್ಯವಿಧಾನ |
|---|---|---|
| 1 | | ಆಹಾರವನ್ನು ಒದ್ದೆಗೊಳಿಸಿ ಚೂರು ಮಾಡುತ್ತದೆ. |
| 2 | | ಜೀರ್ಣಕ್ರಿಯೆಯ ಕೊನೆಯಲ್ಲಿ ಉಳಿಯುವ ಆಹಾರ ತ್ಯಾಜ್ಯ–ವನ್ನು ಹೊರಸಾಗಿಸುತ್ತದೆ. |

| | | |
|---|---|---|
| 3 | | ಇಲ್ಲಿ ಆಹಾರವನ್ನು ದೇಹಕ್ಕೆ ಬೇಕಾದ ಪೋಷಕಾಂಶಗಳಾಗಿ ಬದಲಾಯಿಸಿ, ರಕ್ತದ ಮೂಲಕ ಎಲ್ಲಾ ಭಾಗಗಳಿಗೆ ಕಳುಹಿಸ-ಲಾಗುತ್ತದೆ. |
| 4 | | ಆಹಾರ ಪ್ರವೇಶಿಸಲು ಅವಕಾಶ ನೀಡುತ್ತದೆ. |
| 5 | | ಹೊಟ್ಟೆಯಲ್ಲಿರುವ ಆಮ್ಲ ಮತ್ತು ಕಿಣ್ವಗಳ ಸಹಾಯದಿಂದ ಆಹಾರವನ್ನು ಇನ್ನಷ್ಟು ಸಣ್ಣ ತುಣುಕಾಗಿಸುತ್ತವೆ. |
| 6 | | ಜೀರ್ಣಗೊಳ್ಳದ ಆಹಾರ ಪದಾರ್ಥಗಳನ್ನು ಸರಳಗೊಳಿಸುತ್ತದೆ |
| 7 | | ಸೇವಿಸಿದ ಆಹಾರವನ್ನು ಜಠರಕ್ಕೆ ಸಾಗಿಸುತ್ತದೆ |
| 8 | | ಆಹಾರವನ್ನು ಕೆಳಗೆ ತಳ್ಳುತ್ತದೆ. |

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 22
## ಮಾನವನ ಉಸಿರಾಟ

B6S9A8

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಮನುಷ್ಯನ ಶ್ವಾಸಕ್ರಿಯೆಯನ್ನು ವಿವರಿಸುವರು ಹಾಗೂ ಶ್ವಾಸಕೋಶದ ಮಾದರಿ ತಯಾರಿಸುವರು.**

**ಚಟುವಟಿಕೆ 1 :** ಕೆಳಗಿನ ಚಟುವಟಿಕೆಗಳನ್ನು ನಿರ್ವಹಿಸಿದಾಗ ನಿನ್ನ ಶ್ವಾಸಕ್ರಿಯೆಯ ದರ ಹೇಗಿರುತ್ತದೆ?

| ಕ್ರ ಸಂ | ನಿರ್ವಹಿಸುವ ಚಟುವಟಿಕೆಗಳು | ಶ್ವಾಸಕ್ರಿಯೆಯ ದರ | | |
|---|---|---|---|---|
| | | ನಿಧಾನ | ಸಾಮಾನ್ಯ | ವೇಗ |
| 1 | ಶಾಂತವಾಗಿ ಕುಳಿತು ಪುಸ್ತಕ ಓದುವಾಗ | | | |
| 2 | ದಿನನಿತ್ಯದ ಕೆಲಸಗಳನ್ನು ನಿರ್ವಹಿಸುತ್ತಿರುವಾಗ | | | |
| 3 | ಶಾಲೆಗೆ ನಡೆಯುತ್ತ ಹೋಗುವಾಗ | | | |
| 4 | ಓಡುತ್ತಿರುವಾಗ | | | |

@KTBS NOT TO BE REPUBLISHED

**ಚಟುವಟಿಕೆ 2 :** ನನ್ನ ಉಸಿರಾಟದ ಗತಿ ಏನು?

ನೀವೀಗ ನಿಮ್ಮ ಇಬ್ಬರೂ ಸ್ನೇಹಿತರ ಜೊತೆ ಸೇರಿ ಒಂದು ನಿಮಿಷದೊಳಗೆ ವಿಶ್ರಾಂತಿ ಸ್ಥಿತಿಯಲ್ಲಿ, ಹೆಚ್ಚಿನ ಕೆಲಸವಾದ ನಂತರ, ಆಟವಾಡಿದ ಬಳಿಕ, ನಿಮಿಷಕ್ಕೆ ಎಷ್ಟು ಬಾರಿ ಉಸಿರಾಡುತ್ತೀರಿ ಎಂಬುದನ್ನು ಲೆಕ್ಕ ಹಾಕಬೇಕು. ಅದಕ್ಕಾಗಿ ಗಡಿಯಾರ ಅಥವಾ ಸ್ಟಾಪ್ ವಾಚ್ ಬಳಸಿ ಶಿಕ್ಷಕರ/ಸ್ನೇಹಿತರ ಸಹಾಯದಿಂದ ಗಮನಿಸಬೇಕು ಮತ್ತು ಕೆಳಗಿನ ಕೋಷ್ಟಕದಲ್ಲಿ ಅದನ್ನು ದಾಖಲಿಸಿ ನಿಮ್ಮ ಅನುಭವವನ್ನು ವಿವರಿಸಬೇಕು.

| ಸಂದರ್ಭ → ಭಾಗವಹಿಸಿದವರು | ವಿಶ್ರಾಂತಿ ಸ್ಥಿತಿಯಲ್ಲಿ | ನಿತ್ಯಜೀವನದಲ್ಲಿ ಕೆಲಸ ನಿರ್ವಹಿಸುವಾಗ | ಆಟವಾಡಿದ ಬಳಿಕ | ಗರಿಷ್ಠ ವ್ಯತ್ಯಾಸ |
|---|---|---|---|---|
| ನನ್ನ ಉಸಿರಾಟ | | | | |
| ಮೊದಲನೇ ಸ್ನೇಹಿತ | | | | |
| ಎರಡನೇ ಸ್ನೇಹಿತ | | | | |

1. ಯಾವ ಸ್ಥಿತಿಯಲ್ಲಿ ಉಸಿರಾಟ ಹೆಚ್ಚು ಆಗಿದೆ ?

2. ಆಟವಾಡಿದ ನಂತರ ಉಸಿರಾಟ ಕ್ರಿಯೆ ವಿಶ್ರಾಂತಿ ಸ್ಥಿತಿಗಿಂತ ಭಿನ್ನವಾಗಿದೆಯೇ? ಏಕೆ?

______________________________________________

3. ಹೆಚ್ಚಿನ ಕೆಲಸ ಮಾಡಿದ ನಂತರ ಉಸಿರಾಟ ಕ್ರಿಯೆ ಕಡಿಮೆಯಾಗಿದೆಯೇ? ಹೆಚ್ಚಾಗಿದೆಯೇ? ಇದು ಏಕೆಂದು ವಿವರಿಸು.

______________________________________________

______________________________________________

**ಚಟುವಟಿಕೆ 3 :** ಶ್ವಾಸಕೋಶದ ಮಾದರಿ ತಯಾರಿಕೆ.

ಪ್ಲಾಸ್ಟಿಕ್ ಬಾಟಲ್‌ನ ಸಹಾಯದಿಂದ ಉಸಿರಾಟದ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬುದನ್ನು ತಿಳಿಯಿರಿ.

ಅವಶ್ಯಕ ವಸ್ತುಗಳು : ತಳ ಕತ್ತರಿಸಿದ ಪ್ಲಾಸ್ಟಿಕ್ ಬಾಟಲ್, ಎರಡು ಬಲೂನು, ಸ್ಟ್ರಾ ಅಥವಾ ವೈ–ಆಕೃತಿಯ ಪೈಪ್, ರಬ್ಬರ್ ಬ್ಯಾಂಡ್, ಒಂದು ರಂಧ್ರವಿರುವ ರಬ್ಬರ್ ಕಾರ್ಕ್, ಬಾಟಲಿಯ ತಳ ಮುಚ್ಚುವ ಗಾತ್ರದ ಒಂದು ದೊಡ್ಡ ಬಲೂನ್.

ಚಿತ್ರದಲ್ಲಿ ತೋರಿಸಿದಂತೆ ಬಾಟಲಿಗೆ ಸ್ಟ್ರಾ ಅಥವಾ ಪೈಪ್ ಹಾಕಿ, ಅದರ ತುದಿಗೆ ಎರಡು ಬಲೂನು ಹಾಕಿ.ಬಾಟಲಿನ ಕೆಳಭಾಗಕ್ಕೆ ದೊಡ್ಡ ಬಲೂನು ಹಾಕಿ. ಈಗ ಕೆಳಗಿನ ಬಲೂನನ್ನು ಮೇಲೆ ಕೆಳಗೆ ಎಳೆದಾಗ, ಒಳಗಿನ ಬಲೂನುಗಳು ಹೇಗೆ ವಿಸ್ತರಿಸುತ್ತವೆ ಮತ್ತು ಕುಗ್ಗುತ್ತವೆ ಎಂಬುದನ್ನು ಗಮನಿಸಿ. ಹೀಗೆ ನಿರಂತರವಾಗಿ ಗಾಳಿಯ ವಿನಿಮಯದಿಂದ ಬಲೂನುಗಳು ಹೇಗೆ ಹಿಗ್ಗುವುದು ಮತ್ತು ಕುಗ್ಗುವುದು ಎಂಬುದನ್ನು ಗಮನಿಸಬೇಕು.

1. ಈ ಮಾದರಿಯಲ್ಲಿನ ಒಳಗಿನ ಎರಡು ಬಲೂನ್‌ಗಳಂತೆ ನಮ್ಮ ದೇಹದ ಯಾವ ಭಾಗಗಳು ಕೆಲಸ ನಿರ್ವಹಿಸುತ್ತವೆ?

______________________________________________

2. ಬಾಟಲಿಯ ತಳ ಭಾಗದಲ್ಲಿನ ದೊಡ್ಡ ಬಲೂನನ್ನು ಎಳೆದಾಗ ಒಳಗಿನ ಸಣ್ಣ ಬಲೂನ್‌ಲ್ಲಿ ಆದ ಬದಲಾವಣೆಯೇನು ?

______________________________________________




NOT TO BE REPUBLISHED @KTBS

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 23
# ದ್ಯುತಿ ಸಂಶ್ಲೇಷಣೆ

N3E3Z4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :ವಿದ್ಯಾರ್ಥಿಗಳು ಸಸ್ಯದ ಭಾಗಗಳು ಮತ್ತು ಅವುಗಳ ಕಾರ್ಯವನ್ನು ಅರ್ಥೈಸಿಕೊಂಡು, ಸಸ್ಯದ ಎಲೆಗಳಲ್ಲಿ ಆಹಾರ ತಯಾರಾಗುವ ಕ್ರಿಯೆಯನ್ನು ಚಿತ್ರಸಹಿತ ವಿವರಿಸುವರು.**

**ಚಟುವಟಿಕೆ 1 :** ನನ್ನನ್ನು ನೋಡಿ, ನನ್ನ ಭಾಗಗಳನ್ನು ಹೆಸರಿಸಿ.
ಕೆಳಗೆ ನೀಡಿರುವ ಸಸ್ಯದ ಭಾಗಗಳನ್ನು ಹೆಸರಿಸಿ, ಭಾಗಗಳ ಕಾರ್ಯವನ್ನು ಬರೆಯಿರಿ.



| ಸಸ್ಯದ ಭಾಗಗಳು | ಭಾಗದ ಕಾರ್ಯ |
|---|---|
| ಬೇರು | |
| ಕಾಂಡ | |
| ಎಲೆ | |
| ಹೂವು | |
| ಬೀಜ | |
| ಮೊಗ್ಗು | |
| ಹಣ್ಣು | |

@KTBS NOT TO BE REPUBLISHED

**ಚಟುವಟಿಕೆ 2 :** ಸಸ್ಯದ ಕೆಲಸಗಳನ್ನು ಯಾರು ಮಾಡುವರು?

| ಕ್ರ.ಸಂ | ಸಸ್ಯದ ಭಾಗದ ಕಾರ್ಯ | ಸಸ್ಯದ ಭಾಗ |
|---|---|---|
| 1 | ನೆಲದೊಳಗೆ ಗಟ್ಟಿ ಹಿಡಿದಿಡಲು ಸಹಾಯ ಮಾಡುವುದು. | |
| 2 | ನೀರು, ಖನಿಜ, ಲವಣಾಂಶ ಮತ್ತು ಪೋಷಕಾಂಶಗಳನ್ನು ಹೀರುವುದು. | |
| 3 | ಎಲೆ, ಹೂ, ಹಣ್ಣು ಇತ್ಯಾದಿಗಳನ್ನು ಬೀಳದಂತೆ ಹಿಡಿಯುವುದು. | |
| 4 | ಬೇರಿನಿಂದ ಹೀರಲ್ಪಟ್ಟ ನೀರು, ಖನಿಜ, ಲವಣಗಳು ಮತ್ತು ಪೋಷಕಾಂಶಗಳನ್ನು ಎಲೆಗಳಿಗೆ ತಲುಪಿಸುವುದು, | |

| | | |
|---|---|---|
| 5 | ಸಸ್ಯದ ಆಹಾರ ತಯಾರಿಕೆ ಮಾಡುವುದು. | |
| 6 | ಹಣ್ಣಾಗಿ ಮಾರ್ಪಾಡಾಗುವುದು | |
| 7 | ಹೊಸ ಸಸ್ಯ ಹುಟ್ಟುವುದು. | |

**ಯೋಜನಾ ಕಾರ್ಯ :** ನನ್ನ ಕೆಲಸವೇನೆಂದು ತಿಳಿಸಿ ನೋಡೋಣ.

ಚಟುವಟಿಕೆ 2ರಲ್ಲಿ ಸಿದ್ಧಪಡಿಸಿಕೊಂಡ ಸಸ್ಯದ ಭಾಗಗಳು ಮತ್ತು ಅದರ ಕಾರ್ಯದ ಮಿಂಚು ಪಟ್ಟಿಗಳನ್ನು ತಯಾರಿಸಿ ನಿಮ್ಮ ಶಾಲಾ ಕೈತೋಟದ ಒಂದು ಸಣ್ಣ ಗಿಡದ ಸರಿಯಾದ ಭಾಗಕ್ಕೆ ಸರಿಯಾದ ಕಾರ್ಯವನ್ನು ವಿವರಿಸುವ ಮಿಂಚು ಪಟ್ಟಿಯನ್ನು ಅಂಟಿಸಬೇಕು. ನಿಮ್ಮ ಜೋಡಣೆ ಸರಿಯಾಗಿದೆಯೇ ಎಂಬುದರ ಕುರಿತು ಶಿಕ್ಷಕರ ಸಹಾಯದಲ್ಲಿ ಚರ್ಚಿಸಬೇಕು.

1. ಸಸ್ಯದ ಬೇರು ಎಲ್ಲಿರುತ್ತದೆ? ಅದರ ಕಾರ್ಯವೇನು?

   ______________________________

2. ಸಸ್ಯದ ಕಾಂಡವು ಸಸ್ಯದ ಯಾವೆಲ್ಲಾ ಭಾಗಗಳೊಂದಿಗೆ ಸಂಪರ್ಕವನ್ನು ಹೊಂದಿರುತ್ತದೆ?

   ______________________________

3. ಸಸ್ಯವು ತನ್ನ ಆಹಾರವನ್ನು ತಾನೇ ತಯಾರಿಸಿಕೊಳ್ಳಲು ಬಳಸಿಕೊಳ್ಳುತ್ತವ ವಸ್ತುಗಳು ಯಾವುವು?

   ______________________________

**ಚಟುವಟಿಕೆ 3 :** ಚಿತ್ರವನ್ನು ಗಮನಿಸಿ, ಸಸ್ಯಗಳಲ್ಲಿ ಆಹಾರ ತಯಾರಿಕೆಯ ಕ್ರಿಯೆಯನ್ನು ವಿವರಿಸಿ.




@KTBS
NOT TO BE REPUBLISHED

ವಿವರಣೆ:

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 24
## ಸಸ್ಯಗಳಲ್ಲಿ ಉಸಿರಾಟ

F7I9R1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಸಸ್ಯಗಳಲ್ಲಿ ನಡೆಯುವ ಉಸಿರಾಟ ಕ್ರಿಯೆಯನ್ನು ಅರಿತುಕೊಳ್ಳುವರು.**

**ಚಟುವಟಿಕೆ 1 :** ಸಸ್ಯಗಳನ್ನು ಗಮನಿಸಿದ್ದೀರಾ? ಹಾಗಾದರೆ ಈ ಕೆಳಗಿನ ಹೇಳಿಕೆಗಳ ಬಗ್ಗೆ ನಿನ್ನ ಅನಿಸಿಕೆ ಏನು? "ಹೌದು" ಅಥವಾ "ಇಲ್ಲ" ಎಂದು ಬರೆ.

a) ಸಸ್ಯಗಳು ಉಸಿರಾಟ ಮಾಡುತ್ತವೆ. ________

b) ಸಸ್ಯಗಳು ಉಸಿರಾಟ ಮಾಡುವಾಗ ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ________

c) ಸಸ್ಯಗಳ ಎಲೆಗಳಲ್ಲಿ ಪತ್ರರಂಧ್ರಗಳಿರುತ್ತವೆ. ________

d) ಸಸ್ಯಗಳ ಉಸಿರಾಟಕ್ಕೆ ಕಾರ್ಬನ್ ಡೈಆಕ್ಸೈಡ್ ಅಗತ್ಯವಿದೆ. ________

e) ಸಸ್ಯಗಳ ಎಲೆಗಳಲ್ಲಿ ಬಾಷ್ಪ ವಿಸರ್ಜನೆ ನಡೆಯುತ್ತದೆ. ________

**ಚಟುವಟಿಕೆ 2 :** ಎಲೆಯ ಕೆಳ ಭಾಗದಲ್ಲಿ ಏನಿದೆ?

ಒಂದು ಎಲೆಯನ್ನು ತೆಗೆದುಕೊಳ್ಳಿ ಅದರ ಕೆಳಭಾಗಕ್ಕೆ ತೆಳುವಾದ ಬಿಳಿ ಕಾಗದವನ್ನು ಒತ್ತಿ ಇಡಿ. ಒಂದೆರಡು ನಿಮಿಷಗಳ ನಂತರ,

1. ವರ್ಧಕ ಮಸೂರದಿಂದ ನೋಡಿದಾಗ ನಿಮಗೆ ಕಾಣುವ ದೃಶ್ಯವೇನು?

________________________________

2. ಎಲೆಯ ಕೆಳಭಾಗದ ಸಣ್ಣ ರಂಧ್ರಗಳ ಕೆಲಸವೇನು?

________________________________

ಇದೇ ಕೆಲಸವನ್ನು ರಾತ್ರಿಯ ಸಮಯದಲ್ಲಿ ನಿಮ್ಮ ಮನೆಯ ಸಮೀಪದ ಒಂದು ಗಿಡದ ಎಲೆಯ ಕೆಳಭಾಗದಲ್ಲಿ ತೆಳುವಾಗಿ ಅರಿಶಿಣವನ್ನು ಲೇಪಿಸಿ ಎಲೆಯನ್ನು ಕತ್ತರಿಸದೆ ಗಿಡದಲ್ಲಿಯೇ ಬಿಡಿ ಒಂದು ಗಂಟೆಯ ನಂತರ ಆ ಎಲೆಯನ್ನು ಕತ್ತರಿಸಿ ಬೆಳಕಿಗೆ ತಂದು ವೀಕ್ಷಿಸಿ.

1. ಎಲೆಯ ಕೆಳಭಾಗದಲ್ಲಿ ನೀನು ಏನನ್ನು ಗಮನಿಸಿದ್ದೀರಿ?

________________________________

2. ಸಣ್ಣ ರಂಧ್ರಗಳ ಬಳಿ ಬಣ್ಣದ ಗುರುತು ಏನಾಗಿದೆ? ಇದಕ್ಕೆ ಕಾರಣವೇನು?

________________________________

3. ಎಲೆಯ ಕೆಳಗಿನ ಈ ಸಣ್ಣ ರಂಧ್ರಗಳಿಗೆ ಏನೆನ್ನುವರು?

________________________________

@KTBS NOT TO BE REPUBLISHED

# ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 25
# ಸಸ್ಯಗಳಲ್ಲಿ ಸಾಗಾಣಿಕೆ

C1K3B8

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಸಸ್ಯಗಳಲ್ಲಿ ನೀರು ಮತ್ತು ಖನಿಜಗಳ ಸಾಗಾಣಿಕೆ ಹಾಗೂ ಮತ್ತು ಭಾಷ್ಪವಿಸರ್ಜನಾ ಪ್ರಕ್ರಿಯೆಯನ್ನು ತಿಳಿಯುವರು.**

**ಚಟುವಟಿಕೆ 1:** ಸಸ್ಯದ ವೀಕ್ಷಣೆ ಮಾಡಿ, ಸಸ್ಯದ ಬಗ್ಗೆ ನಿಮಗೆಷ್ಟು ಗೊತ್ತು ಹೇಳಿ?

ಮಕ್ಕಳೇ, ಒಂದು ಸಣ್ಣ ತುಳಸಿ ಗಿಡವನ್ನು ಬೇರು ಸಮೇತ ತೆಗೆದುಕೊಂಡು ಸಸ್ಯದಲ್ಲಿ ಏನನ್ನು ಗಮನಿಸಿದಿರಿ ಎಂದು ನಿಮ್ಮ ಸ್ನೇಹಿತರೊಡನೆ ಚರ್ಚಿಸಿ ಮತ್ತು ನೀವು ಗಮನಿಸಿದ ಅನುಭವವನ್ನು ವ್ಯಕ್ತಪಡಿಸಿ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ನೀಡಿ:




1. ಗಿಡದ ಎಲೆಗಳು ಯಾವ ಬಣ್ಣದಲ್ಲಿವೆ?

   ______________________

2. ನೀವು ಗಿಡದ ಕಾಂಡ ಹಿಡಿದು ಕಿತ್ತಾಗ ಯಾವ ಭಾಗ ಕಾಣಿಸಿತು?

   ______________________

3. ಗಿಡದ ಬೇರು ಮಣ್ಣಿನಲ್ಲಿ ಯಾವ ಕೆಲಸ ಮಾಡುತ್ತದೆ?

   ______________________

4. ಗಿಡವು ನೀರನ್ನು ಎಲ್ಲಿಂದ ಹೀರಿಕೊಳ್ಳುತ್ತದೆ?

   ______________________

5. ನೀರು ಮತ್ತು ಖನಿಜಗಳು ಎಲೆಗಳಿಗೆ ಹೇಗೆ ಸಾಗಿಸಲ್ಪಡುತ್ತದೆ ?

   ______________________

6. ಸಸ್ಯದ ಯಾವ ಭಾಗದಲ್ಲಿ ಬಾಷ್ಪ ವಿಸರ್ಜನೆ ಜರುಗುತ್ತದೆ?

   ______________________

@KTBS NOT TO BE REPUBLISHED

**ಚಟುವಟಿಕೆ 2 :** ಸಸ್ಯಗಳಲ್ಲಿ ನೀರು ಮತ್ತು ಖನಿಜಗಳು ಹೇಗೆ ಸಾಗುತ್ತವೆ?



**ಅವಶ್ಯಕ ಸಾಮಗ್ರಿಗಳು:** ಗಾಜಿನ ಲೋಟ, ಸ್ವಚ್ಛ ನೀರು, ಕೆಂಪು ಶಾಹಿ (ಇಂಕ್ ಅಥವಾ ಫುಡ್ ಕಲರ್), ಎಳೆಯ ಕಾಂಡದ ಸಸ್ಯ, (ಉದಾಹರಣೆ: ಕರ್ಣಕುಂಡಲ ಸಸ್ಯ), ಬ್ಲೇಡ್ ಅಥವಾ ಕತ್ತರಿಸುವ ಉಪಕರಣ.

ಗಾಜಿನ ಲೋಟದಲ್ಲಿ ಮೂರನೇ ಒಂದು ಭಾಗದಷ್ಟು ನೀರಿಗೆ ಕೆಲ ಹನಿಗಳಷ್ಟು ಕೆಂಪು ಶಾಹಿಯನ್ನು ಸೇರಿಸಿ. ಎಳೆಯ ಸಸ್ಯದ ಕಾಂಡದ ಕೆಳಭಾಗವನ್ನು ಬ್ಲೇಡ್‌ನಿಂದ ಕತ್ತರಿಸಿ. ಆ ಸಸ್ಯವನ್ನು ಲೋಟದೊಳಗೆ ನಿಲ್ಲಿಸಿ, ಒಂದು ದಿನ ಕಾದು ನೋಡಿ.

ಮರುದಿನ ಸಸ್ಯದ ಎಲೆಗಳು ಅಥವಾ ಕಾಂಡದ ಭಾಗಗಳು ಬಣ್ಣವಾಗಿದೆಯೇ? ಕಾಂಡವನ್ನು ಅಡ್ಡಲಾಗಿ ಕತ್ತರಿಸಿ ಒಳಗೆ ಬಣ್ಣ ಕಾಣುತ್ತದೆಯೇ ನೋಡಿ.

1. ನೀವು ಯಾವ ಸಸ್ಯವನ್ನು ಬಳಸಿದಿರಿ?

______________________________

2. ಸಸ್ಯವನ್ನು ನೀರಿನಲ್ಲಿ ಎಷ್ಟು ಸಮಯ ಇರಿಸಿದ್ದಿರಿ?

______________________________

3. ಸಸ್ಯದ ಯಾವ ಭಾಗದಲ್ಲಿ ಬಣ್ಣದ ಬದಲಾವಣೆ ಕಂಡುಬಂದಿತು?

______________________________

4. ಈ ಬಣ್ಣವು ಸಸ್ಯದ ಒಳಗೆ ಹೇಗೆ ತಲುಪಿತು ಎಂದು ನಿಮಗೆ ಅನಿಸುತ್ತದೆ?

______________________________

5. ನೀವು ಕಾಂಡವನ್ನು ಕತ್ತರಿಸಿದಾಗ ಒಳಗೆ ಬಣ್ಣ ಕಂಡುಬಂದಿತ್ತೇ? ಹೌದು / ಇಲ್ಲ

______________________________

6. ಸಸ್ಯಗಳು ಜೀವಿಸಲು ನೀರು ಮತ್ತು ಖನಿಜಗಳು ಮುಖ್ಯವಾಗಿದೆ. ಏಕೆ?

______________________________

7. ಸಸ್ಯಗಳ ಬೆಳವಣಿಗೆಗೆ ಪೋಷಕಾಂಶಗಳ ಸಾಗಾಣಿಕೆ ಅವಶ್ಯಕ ಏಕೆ? ವಿವರಿಸಿ.

______________________________

8. ಸಸ್ಯಗಳಿಂದ ಹೆಚ್ಚಾದ ನೀರು ಎಲೆಗಳ ಮೂಲಕ ಹೊರ ಬರುವ ಕ್ರಿಯೆ ಯಾವುದು?

______________________________

@KTBS NOT TO BE REPUBLISHED

**ಕೇಳಿ ತಿಳಿ**

ಸಸ್ಯಗಳು ತಮ್ಮ ಆಹಾರವನ್ನು ತಾವೇ ತಯಾರಿಸಲು ನೀರಿನ ಅವಶ್ಯಕತೆ ಇದೆ ಏಕೆ?
ಯೋಚಿಸಿ ನಿಮ್ಮ ಅನಿಸಿಕೆಯನ್ನು ಶಿಕ್ಷಕರೊಂದಿಗೆ ಚರ್ಚಿಸಿ ಬರೆಯಿರಿ

# ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 26

# ನೆರಳು ಮತ್ತು ಪ್ರತಿಫಲನ

G2B3S1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ಬೆಳಕಿನ ಮೂಲಗಳನ್ನು ಗುರುತಿಸುವರು ಹಾಗೂ ನೆರಳು ಉಂಟಾಗುವಿಕೆಯನ್ನು ವಿವರಿಸುವರು.

**ಚಟುವಟಿಕೆ 1 :**

ಕೆಳಗೆ ನೀಡಿರುವ ಚಿತ್ರಗಳನ್ನು ವೀಕ್ಷಿಸಿ. ಅವುಗಳನ್ನು ಬೆಳಕಿನ ಸ್ವಾಭಾವಿಕ ಮತ್ತು ಬೆಳಕಿನ ಕೃತಕ ಮೂಲಗಳಾಗಿ ವಿಂಗಡಿಸಿ ಕೆಳಗೆ ನೀಡಿದ ಕೋಷ್ಟಕದಲ್ಲಿ ಬರೆಯಿರಿ.



| ಸ್ವಾಭಾವಿಕ ಬೆಳಕಿನ ಮೂಲ | ಕೃತಕ ಬೆಳಕಿನ ಮೂಲ |
|---|---|
| | |

@KTBS NOT TO BE REPUBLISHED

**ಚಟುವಟಿಕೆ 2 :** ನೀವು ಸಂಗ್ರಹಿಸಿದ ಅಪಾರದರ್ಶಕ ವಸ್ತುಗಳನ್ನು ಬಳಸಿಕೊಳ್ಳಿರಿ. ತರಗತಿ ಕೋಣೆಯಿಂದ ಹೊರಗೆ ಬಂದು ಸಂಗ್ರಹಿಸಿದ ವಸ್ತುಗಳನ್ನು ಇಟ್ಟು ನಂತರ ಒಂದಾದ ಮೇಲೊಂದರಂತೆ ಪ್ರತಿಯೊಂದು ಅಪಾರದರ್ಶಕ ವಸ್ತುಗಳನ್ನು ನೆಲದಿಂದ ಸ್ವಲ್ಪ ಮೇಲೆ ಸೂರ್ಯನ ಬೆಳಕಿನಲ್ಲಿ ಹಿಡಿಯಿರಿ ಮತ್ತು ವಸ್ತುಗಳ ನೆರಳುಗಳನ್ನು ವೀಕ್ಷಿಸಿರಿ. ಚಿತ್ರದಲ್ಲಿ ತೋರಿಸಿದಂತೆ ನೆರಳಿನ ಹೊರರೇಖೆಗಳನ್ನು ಬಿಳಿ ಹಾಳೆಗಳಲ್ಲಿ ಗುರುತಿಸಿ. ಛಾಯೆಗಳ ಹೊರರೇಖೆಗಳಿಂದ ವಸ್ತುಗಳನ್ನು ಗುರುತಿಸಿರಿ.





**ಚಟುವಟಿಕೆ 4 :** ಬೆಳಗ್ಗೆ, ಮಧ್ಯಾಹ್ನ ಮತ್ತು ಸಂಜೆ ಸೂರ್ಯನ ಬೆಳಕಿಗೆ ವಿರುದ್ಧವಾಗಿ ಉಂಟಾಗುವ ನಿಮ್ಮ ನೆರಳುಗಳನ್ನು ವೀಕ್ಷಿಸಿರಿ. ನಿಮ್ಮ ನೆರಳುಗಳ ಗಾತ್ರ ಮತ್ತು ಸ್ಥಾನವನ್ನು ಚಿತ್ರದ ಮೂಲಕ ತೋರಿಸಿರಿ.






ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಪದಕ್ಕೆ (✓) ಗುರುತು ಹಾಕಿರಿ.

1. ಪಾರದರ್ಶಕ / ಅಪಾರದರ್ಶಕ ವಸ್ತುಗಳು ನೆರಳುಗಳನ್ನು ರೂಪಿಸುತ್ತವೆ.
2. ನೆರಳಿನ ಬಣ್ಣವು ಕಪ್ಪು / ವಸ್ತುವಿನ ಬಣ್ಣದ್ದೇ ಆಗಿರುತ್ತದೆ.
3. ನೆರಳಿನ ಗಾತ್ರವು ಬೆಳಕಿನ ಮೂಲದಿಂದ ಹತ್ತಿರವಿದ್ದಾಗ / ದೂರವಿದ್ದಾಗ ದೊಡ್ಡದಾಗಿರುತ್ತದೆ.
4. ನೆರಳಿನ ಗಾತ್ರವು ಪರದೆಯಿಂದ ವಸ್ತುವನ್ನು ದೂರಕ್ಕೆ / ಹತ್ತಿರಕ್ಕೆ ಸರಿಸಿದಾಗ ದೊಡ್ಡದಾಗಿರುತ್ತದೆ.

- ನಿಮ್ಮ ಕೈ ಬೆರಳುಗಳ ಸಹಾಯದಿಂದ ವಿವಿಧ ರೀತಿಯ ನೆರಳುಗಳನ್ನು ರಚಿಸಲು ಪ್ರಯತ್ನಿಸಿರಿ.

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 27
## ಸಮತಲದರ್ಪಣದಲ್ಲಿ ಪ್ರತಿಬಿಂಬ

J9G2S5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಸಮತಲ ದರ್ಪಣದಲ್ಲಿ ಉಂಟಾಗುವ ಪ್ರತಿಬಿಂಬದ ಲಕ್ಷಣಗಳನ್ನು ವಿವರಿಸುವರು.**

ಚಟುವಟಿಕೆ 1 : "ನಾನು ಏನನ್ನು ನೋಡುತ್ತಿದ್ದೇನೆ?"
ನಿಮ್ಮ ಪ್ರತಿಬಿಂಬವನ್ನು ಸಮತಲ ದರ್ಪಣ (ಕನ್ನಡಿ)ಯಲ್ಲಿ ಗಮನಿಸಿ, ಅದರ ಗುಣಲಕ್ಷಣಗಳನ್ನು ಗುರುತಿಸಿ.

1. ದರ್ಪಣದಿಂದ ನೀನು ಎಷ್ಟು ದೂರದಲ್ಲಿದ್ದೀಯ?

   ________________________________________

2. ನಿನ್ನ ಪ್ರತಿಬಿಂಬವು ದರ್ಪಣದಿಂದ ಎಷ್ಟು ದೂರದಲ್ಲಿರುವಂತೆ ಕಾಣಿಸುತ್ತಿದೆ?

   ________________________________________

3. ನಿನ್ನ ಪ್ರತಿಬಿಂಬಕ್ಕೂ ನಿನಗೂ ಇರುವ ಅಂತರವೆಷ್ಟು? ಊಹಿಸಿ ಹೇಳು.

   ________________________________________

4. ಪ್ರತಿಬಿಂಬದ ಗಾತ್ರ ಮತ್ತು ನಿನ್ನ ಗಾತ್ರ ಒಂದೇ ಆಗಿದೆಯಾ?

   ________________________________________

5. ಕನ್ನಡಿಯಲ್ಲಿ ನಿಮ್ಮ ಎಡ ಮತ್ತು ಬಲಭಾಗದಲ್ಲಿ ಏನಾದರೂ ವ್ಯತ್ಯಾಸ ಕಾಣುತ್ತಿದೆಯೇ? ಕೈ ಬಳಸಿ ನೋಡಿ ತಿಳಿಸು.

   ________________________________________

6. ನಾನು ದರ್ಪಣದಿಂದ ದೂರ ಸರಿದರೆ, ನನ್ನ ಪ್ರತಿಬಿಂಬ ಹೇಗೆ ಬದಲಾಗುತ್ತದೆ?

   ________________________________________

7. ನಾನು ಬಲಕ್ಕೆ ಹೋದರೆ, ಪ್ರತಿಬಿಂಬ ಯಾವ ಕಡೆಗೆ ಸಾಗುತ್ತದೆ?

   ________________________________________

ಚಟುವಟಿಕೆ 2 : ಸಮತಲ ದರ್ಪಣದಲ್ಲಿ ಇಂಗ್ಲಿಷ್ ಕ್ಯಾಪಿಟಲ್ ಅಕ್ಷರಗಳು ಹೇಗೆ ಕಾಣುತ್ತವೆ ಎಂಬುದನ್ನು ಗುರುತಿಸಿ, ಕೋಷ್ಟಕ ಪೂರ್ಣಗೊಳಿಸು.




@KTBS NOT TO BE REPUBLISHED

| ಕ್ರ.ಸಂ | ಅಕ್ಷರ | ದರ್ಪಣದಲ್ಲಿ ಪ್ರತಿಬಿಂಬ ಬದಲಾಗಿದೆಯೇ? | | ಗಾತ್ರದಲ್ಲಿ ಬದಲಾವಣೆಯಾಗಿ-ದೆಯೇ? | | ಪ್ರತಿಬಿಂಬ | |
|---|---|---|---|---|---|---|---|
| | | ಹೌದು | ಇಲ್ಲ | ಹೌದು | ಇಲ್ಲ | ನೇರವಾಗಿದೆ-ಯೇ? | ತಲೆಕೆಳಗಾಗಿ-ದೆಯೇ? |
| 1 | A | | | | | | |
| 2 | C | | | | | | |
| 3 | F | | | | | | |
| 4 | G | | | | | | |
| 5 | H | | | | | | |
| 6 | O | | | | | | |
| 7 | R | | | | | | |
| 8 | I | | | | | | |

**ಚಟುವಟಿಕೆ 3 :** ಸಮತಲ ದರ್ಪಣದಲ್ಲಿ ನನ್ನ ರೂಪ ಹೇಗಿದೆ? ನನ್ನ ಬಿಂಬ ಎಷ್ಟು ದೂರದಲ್ಲಿದೆ?





NOT TO BE REPUBLISHED ©KTBS

ದರ್ಪಣದ ಮುಂದೆ ಈ ಕೆಳಗಿನ ಅಂತರದಲ್ಲಿ ನಿಂತು ನಿನ್ನ ಪ್ರತಿಬಿಂಬ ಹೇಗಿದೆ? ಎಷ್ಟು ದೂರದಲ್ಲಿದೆ? ಎಂಬುದನ್ನು ವೀಕ್ಷಿಸಿ ಕೋಷ್ಟಕದಲ್ಲಿ ಬರೆ.

| ದರ್ಪಣದಿಂದ ನನ್ನ ಅಂತರ | ನನಗೂ ಮತ್ತು ನನ್ನ ಪ್ರತಿಬಿಂಬ-ಕ್ಕೂ ಇರುವ ಅಂತರ ಊಹಿಸಿಬ-ರೆ.(ಸೆಂ.ಮೀ.ಗಳಲ್ಲಿ) | ಗಾತ್ರ ಬದಲಾವಣೆ ಆಗಿದೆಯೇ? | ರೂಪ ಬದಲಾವಣೆ ಆಗಿದೆಯೇ? | ನೇರವಾಗಿದೆಯೇ? | ತಲೆ ಕೆಳಗಾಗಿದೆ-ಯೇ? |
|---|---|---|---|---|---|
| | | ಹೌದು / ಇಲ್ಲ | ಹೌದು / ಇಲ್ಲ | ಹೌದು / ಇಲ್ಲ | ಹೌದು / ಇಲ್ಲ |
| 80 ಸೆಂ.ಮೀ | | | | | |
| 100 ಸೆಂ.ಮೀ | | | | | |
| 120 ಸೆಂ.ಮೀ | | | | | |

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 28
## ಸೌರ ಕುಟುಂಬ ಮಾದರಿ ತಯಾರಿ

M8L9Y4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ವಿದ್ಯಾರ್ಥಿಗಳು ಸೌರವ್ಯೂಹವನ್ನು ಮಾದರಿ ಸಹಿತ ವಿವರಿಸುವರು.**

**ಚಟುವಟಿಕೆ 1 :** ಭೂಮಿ, ಚಂದ್ರ ಮತ್ತು ಸೂರ್ಯ ಇವುಗಳ ಮಾದರಿ ತಯಾರಿಸೋಣ.
ಅವಶ್ಯಕ ಸಾಮಗ್ರಿಗಳು: ಎರಡು ಪೇಪರ್ ಪ್ಲೇಟ್ ಗಳು, ಸ್ಕೆಚ್ ಪೆನ್ ಗಳು, ಪೆನ್ಸಿಲ್, ಕತ್ತರಿ, ಸ್ಪ್ಲಿಟ್ ಪಿನ್ –ಗಳು, ಎರಡು ರಟ್ಟಿನ ಉದ್ದನೆಯ ತುಂಡುಗಳು.

**ಮಾದರಿಯನ್ನು ತಯಾರಿಸುವ ಹಂತಗಳು :**

- ಹಂತ 1: ಒಂದು ಪೇಪರ್ ಪ್ಲೇಟ್ ಮೇಲೆ ಪೆನ್ಸಿಲ್ ನಿಂದ ದೊಡ್ಡ ವೃತ್ತ ಹಾಕಿ ಕತ್ತರಿಸಿ.
- ಹಂತ 2: ಇನ್ನೊಂದು ಪೇಪರ್ ಪ್ಲೇಟ್ ಮೇಲೆ ಎರಡು ಚಿಕ್ಕ ವೃತ್ತಗಳನ್ನು ಹಾಕಿ ಎರಡೂ ವೃತ್ತಗಳನ್ನು ಕತ್ತರಿಸಿ
- ಹಂತ3: ದೊಡ್ಡ ವೃತ್ತಕ್ಕೆ ಹಳದಿ ಬಣ್ಣ ,ಮಧ್ಯಮ ಗಾತ್ರದ ವೃತ್ತಕ್ಕೆ ಹಸಿರು ಬಣ್ಣವನ್ನು ಮತ್ತು ಚಿಕ್ಕ ವೃತ್ತಕ್ಕೆ ಬೂದು ಬಣ್ಣವನ್ನು ಹಚ್ಚಿರಿ.
- ಹಂತ 4: ದೊಡ್ಡ ವೃತ್ತದ ಮಧ್ಯದಲ್ಲಿ ಸ್ಪ್ಲಿಟ್ ಪಿನ್ ಚುಚ್ಚಿ ಅದನ್ನು ರಟ್ಟಿನ ಒಂದು ತುದಿಯಲ್ಲಿ (ಚಿತ್ರದಲ್ಲಿ ತೋರಿಸಿದಂತೆ )ಚುಚ್ಚಿ ಹಿಂಭಾಗದಲ್ಲಿ ಬಿಗಿಗೊಳಿಸಿ.

.






NOT TO BE REPUBLISHED
@KTBS

ರಟ್ಟಿನ ಇನ್ನೊಂದು ತುದಿಯಲ್ಲಿ ಅದರ ಮೇಲೆ ರಟ್ಟಿನ ತುಂಡು ಇಟ್ಟು ಮತ್ತೆ ಅದರ ಮೇಲೆ ಹಸಿರು ಬಣ್ಣದ ವೃತ್ತವನ್ನು ಇಟ್ಟು ಸ್ಪ್ಲಿಟ್ ಪಿನ್ ಚುಚ್ಚಿ ಹಿಂಭಾಗದಲ್ಲಿ ಬಿಗಿಗೊಳಿಸಿ.

ರಟ್ಟಿನ ಕೊನೆಯ ತುದಿಗೆ ಬೂದು ಬಣ್ಣದ ವೃತ್ತವನ್ನು ಇಟ್ಟು ಸ್ಪ್ಲಿಟ್ ಪಿನ್ ನಿಂದ ಹಿಂಭಾಗದಲ್ಲಿ ಬಿಗಿಗೊಳಿಸಿ. ಹೊರ ಚಾಚಿದ ಪಿನ್ ನ ಭಾಗವನ್ನು ಮತ್ತೆ ಒಳಮುಖವಾಗಿ ಮಡಿಚಿ ಬಿಗಿ ಮಾಡಿ.

ಸೂರ್ಯನ ಸುತ್ತ ಭೂಮಿ ಸುತ್ತುವಂತೆ, ಭೂಮಿಯ ಸುತ್ತ ಚಂದ್ರ ಸುತ್ತುವಂತೆ ವೃತ್ತಗಳನ್ನು ತಿರುಗಿಸಿ.

**ಸೂಚನೆ:** ಸೂರ್ಯ ಗ್ರಹಣ, ಚಂದ್ರ ಗ್ರಹಣ, ಹಗಲು ರಾತ್ರಿ ಉಂಟಾಗುವಿಕೆಯ ಚಟುವಟಿಕೆಗಳನ್ನು ಕೈಗೊಳ್ಳುವಾಗ ಈ ಮಾದರಿಯನ್ನು ಬಳಸಿ.

**ಆಲೋಚಿಸಿ:** ಎಲ್ಲಾ ಸೂರ್ಯ ಗ್ರಹಣಗಳು ಅಮಾವಾಸ್ಯೆಯ ದಿನದಂದು ಸಂಭವಿಸುತ್ತವೆ, ಎಲ್ಲಾ ಚಂದ್ರ ಗ್ರಹಣಗಳು ಹುಣ್ಣಿಮೆಯ ದಿನದಂದು ಸಂಭವಿಸುತ್ತವೆ ಕಾರಣದ ಕುರಿತು ಮಾಹಿತಿ ಸಂಗ್ರಹಿಸಿ .

**ಚಟುವಟಿಕೆ 2 :** ಸೌರವ್ಯೂಹ ಮಾದರಿ ತಯಾರಿಕೆ

ಬೇಕಾಗುವ ಸಾಮಗ್ರಿಗಳು: ವಿವಿಧ ಗಾತ್ರದ ಹಳೆಯ ಬಾಲ್ ಗಳು ಅಥವಾ ಮಣ್ಣಿನ ಉಂಡೆಗಳು ದಾರ ಮತ್ತು ರಟ್ಟಿನ ಹಾಳೆ

**ಹಂತಗಳು :** ವಿವಿಧ ಗಾತ್ರದ ಹ ಳೆಯ ಬಾಲ್ ಗಳು ಅಥವಾ ಮಣ್ಣಿನ ಉಂಡೆಗಳನ್ ತೆಗೆದುಕೊಂಡು ಗ್ರಹಗಳ ಬಣ್ಣಗ-ಳನ್ನು ಅವುಗಳಿಗೆ ಹೊಡೆದು ರಟ್ಟಿನ ಮಧ್ಯದಲ್ಲಿ ಸೂರ್ಯನನ್ನು ಇರಿಸಿ ದಾರದ ಸಹಾಯದಿಂದ ಕಕ್ಷೆಯನ್ನು ತಯಾರಿಸಿ ವಿವಿಧ ಗಾತ್ರದ ಗ್ರಹಗಳನ್ನು ಕ್ರಮವಾಗಿ ಜೋಡಿಸಿ.

